
ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಸಂಪುಟ : 37 ಸಂಚಿಕೆ : 7 ಮನ್ಮಥ–ತುಲಾ ಕಲಿಯುಗಾಬ್ದ 5117 15–11–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಗೋಸಂಪತ್ತಿನ ಸಂರಕ್ಷಣೆ – ಸಂವರ್ಧನೆಗಾಗಿ ಗೋಶಾಲೆಗಳು

ವಿಶ್ವದಲ್ಲೇ ಅತಿ ಹೆಚ್ಚು ಪಶುಸಂಪತ್ತುಳ್ಳ ದೇಶ ಭಾರತ. ಗೋವಂಶದಿಂದ ಮನುಷ್ಯನಿಗಾಗುವ ಪ್ರಯೋಜನವನ್ನು ಮನಗಂಡಿದ್ದರಿಂದಲೇ ನಮ್ಮ ಪೂರ್ವಜರು ದನಕರುಗಳ ಸಂರಕ್ಷಣೆಗೆ ಮಹತ್ವ ನೀಡಿದ್ದಲ್ಲದೇ ಗೋವಿಗೆ ಪೂಜ್ಯ ಸ್ಥಾನವನ್ನೂ ನೀಡಿದ್ದರು. ಇಂದಿನ ಸನ್ನಿವೇಶದಲ್ಲಿ ಗೋಹತ್ಯೆ ಮತ್ತು ಗೋಮಾಂಸ ಭಕ್ಷಣೆಯ ಕುರಿತ ರಾಜಕೀಯ ಮೇಲಾಟಗಳ ನಡುವೆಯೂ ನಮ್ಮ ದೇಶದ ಹೆಚ್ಚಿನ ಮನೆಗಳಲ್ಲಿ ಇಂದಿಗೂ ಗೋಸೇವೆಯೊಂದಿಗೇ ದಿನನಿತ್ಯದ ಚಟುವಟಿಕೆಗಳು ಆರಂಭವಾಗುವುದು. ಹಾಗೆಯೇ ಭಾರತೀಯ ಗೋವಂಶದ ಉಳಿವಿಗಾಗಿ ಸಾವಿರಾರು ಸಂರಕ್ಷಣಾ ಕೇಂದ್ರಗಳು ದೇಶದಾದ್ಯಂತ ಕಾರ್ಯನಿರ್ವಹಿಸುತ್ತಿದ್ದು ಕರ್ನಾಟಕ ರಾಜ್ಯದಲ್ಲೇ ಸುಮಾರು 80 ಗೋಶಾಲೆಗಳಿವೆ. ದೇಸೀ ಗೋತಳಿಗಳ ಸಂರಕ್ಷಣೆ ಈ ಎಲ್ಲ ಗೋಶಾಲೆಗಳ ಮೂಲ ಉದ್ದೇಶವಾದರೂ ಪ್ರತಿಯೊಂದು ಕೇಂದ್ರದ ಕಾರ್ಯವಿಧಾನವೂ ತನ್ನದೇ ಆದ ವಿಶೇಷತೆ ಹಾಗೂ ಹೊಸತನವನ್ನು ಅಳವಳಡಿಸಿಕೊಳ್ಳುವ ಮೂಲಕ ಭಿನ್ನವಾಗಿದೆ. ಈ ಹಿನ್ನೆಲೆಯಲ್ಲಿ ಒಂದೆರಡು ಗೋಶಾಲೆಗಳ ಕಿರುಪರಿಚಯವನ್ನು ಇಲ್ಲಿ ನೀಡಲಾಗಿದೆ.

## ರಾಷ್ಟ್ರೋತ್ಥಾನ ಗೋಶಾಲೆ – ಗೋಸಂರಕ್ಷಣೆ – ಸಂವರ್ಧನೆ – ಸಂಶೋಧನೆ

ದೊಡ್ಡಬಳ್ಳಾಪುರ ತಾಲೂಕಿನ ಘಾಟಿ ಸುಬ್ರಹ್ಮಣ್ಯದ ಹತ್ತಿರ ಸುಮಾರು ನೂರೈವತ್ತು ಎಕರೆ ವಿಶಾಲವಾದ ಪ್ರದೇಶದಲ್ಲಿ ರಾಷ್ಟ್ರೋತ್ಥಾನ ಗೋಶಾಲೆ ಕಾರ್ಯನಿರ್ವಹಿಸುತ್ತಿದ್ದು, ದೇಸೀ ತಳಿಯ ಸುಮಾರು ಐದುನೂರು ದನಕರುಗಳು ಇಲ್ಲಿ ಆಶ್ರಯ ಪಡೆದಿವೆ. ದೂರದ ರಾಜಸ್ಥಾನದಿಂದ ಕಾಂಕ್ರೇಜ್, ಗುಜರಾತಿನಿಂದ ಗೀರ್, ಮಧ್ಯಭಾರತದಿಂದ ಸಾಹೀವಾಲ್, ಮಹಾರಾಷ್ಟ್ರದಿಂದ ದೇವನಿ ಮೊದಲಾದ ತಳಿಗಳನ್ನು ತರಿಸಲಾಗಿದ್ದು ಸ್ಥಳೀಯ ವಾತಾವರಣಕ್ಕೆ ಅವುಗಳು ಹೊಂದಿಕೊಳ್ಳುವಂತೆ ವಿಶೇಷ ಕಾಳಜಿವಹಿಸಿ ಸಾಕಲಾಗುತ್ತಿದೆ. ಕೇವಲ ಗೋಸಂರಕ್ಷಣೆಗಷ್ಟೇ ಸೀಮಿತವಾಗದೇ ಪ್ರತಿಯೊಂದು ತಳಿಯ ಭೌತಿಕ ಅಗತ್ಯಗಳು, ಆಹಾರ, ಹಾಲು ಮೊದಲಾದ ಗೋಉತ್ಪನ್ನಗಳ ಪ್ರಮಾಣ, ಪ್ರಯೋಜನಗಳು ಮೊದಲಾದ ವಿಷಯಗಳಲ್ಲಿ ಸಂಶೋಧನೆ ಇಲ್ಲಿ ನಡೆಯುತ್ತಿದೆ. ಅತಿ ಹೆಚ್ಚು ಹಾಲು ಕೊಡುವ ಗುಜರಾತಿನ ಗೀರ್ ಮತ್ತು ರಾಜಸ್ಥಾನದ ಕಾಂಕ್ರೇಜ್ ತಳಿಗಳನ್ನು ತಂದು ಅವು ಇಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ಮಾಡಲಾಗಿದೆ. ತಳಿ ಸಂವರ್ಧನೆಯಲ್ಲಿ ವಿಶೇಷ ಕಾಳಜಿ ವಹಿಸಿದ್ದರ ಪರಿಣಾಮವಾಗಿ ಈ ತಳಿಗಳು ದಿನಕ್ಕೆ 12ರಿಂದ 15 ಲೀಟರಿನವರೆಗೆ ಹಾಲನ್ನು ನೀಡುವುದು ಇಲ್ಲಿನ ವಿಶೇಷತೆ.

ಸುತ್ತಲಿನ ಗ್ರಾಮಗಳ ರೈತರಿಗೆ ಹೋರಿಗಳನ್ನು ಸಾಕಲು ನೀಡುವುದು, ಗ್ರಾಮವನ್ನು ದತ್ತು ತೆಗೆದುಕೊಂಡು ಗೋಕೇಂದ್ರಿತ ಉಳುಮೆಯ ಸಾವಯವ ಕೃಷಿಯ ಮೂಲಕ ಅಭಿವೃದ್ಧಿಪಡಿಸುವುದು, ಗೋಬರ್ ಗ್ಯಾಸ್ ಘಟಕವನ್ನು ನಿರ್ಮಿಸುವುದು ಮೊದಲಾದ ಅನೇಕ ಕಾರ್ಯಗಳನ್ನು ರಾಷ್ಟ್ರೋತ್ಥಾನ ಗೋಶಾಲೆ ಹಮ್ಮಿಕೊಂಡಿದೆ. ಜನಪರ ಸಂಸ್ಥೆಯೊಂದು ಸಮರ್ಥವಾಗಿ ನಡೆಸುವ ಗೋಸಂರಕ್ಷಣಾ ಕಾರ್ಯದ ಮಾದರಿಯನ್ನು ರಾಷ್ಟ್ರೋತ್ಥಾನ ಗೋಶಾಲೆಯಲ್ಲಿ ಕಾಣಬಹುದು.


ರಾಜಾನಕುಂಟೆಯ ಗೋಶಾಲೆಯಲ್ಲಿ ಓಂಗೋಲ್ ತಳಿಯ ಹಸುಗಳು


ರಾಷ್ಟ್ರೋತ್ಥಾನ ಗೋಶಾಲೆಯಲ್ಲಿ ಗೀರ್ ತಳಿಯ ಹಸುಗಳು

## ರೈತರಿಗೆ ಉಚಿತವಾಗಿ ಎತ್ತುಗಳನ್ನು ಕೊಡುವ ಯೋಜನೆ

ಅರ್ಹ ರೈತರಿಗೆ ಉಳುಮೆಗಾಗಿ ಎತ್ತಿನ ಜೋಡಿಯನ್ನು ಉಚಿತವಾಗಿ ಕೊಡುವ ಯೋಜನೆ ರಾಷ್ಟ್ರೋತ್ಥಾನ ಗೋಶಾಲೆಯಲ್ಲಿ ಜಾರಿಯಲ್ಲಿದೆ. ರೈತರಿಂದ ಅರ್ಜಿಯನ್ನು ಪಡೆದು ಯೋಗ್ಯತಾ ಪರೀಕ್ಷೆಯ ನಂತರ ಎತ್ತಿನ ಜೋಡಿಯನ್ನು ಉಚಿತವಾಗಿ ನೀಡಲಾಗುತ್ತದೆ. ಅಂತಹ ಫಲಾನುಭವಿ ರೈತರಿಗೆ ನೀಡಿದ ಜಾನುವಾರಿನ ಆರೋಗ್ಯ ಹಾಗೂ ಬಳಕೆಯ ಕುರಿತು ಕಾಲಕಾಲಕ್ಕೆ ಅಧಿಕೃತ ತಪಾಸಣೆ ನಡೆಸಿ ವೀಡಿಯೋ ಚಿತ್ರೀಕರಣದ ದಾಖಲೆಗಳನ್ನು ಮಾಡಲಾಗುತ್ತದೆ. ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆ ಬೆಳೆಯುವವರಿಗೆ ಮಾತ್ರ ಎತ್ತಿನ ಜೋಡಿಗಳನ್ನು ನೀಡುವುದು ಇನ್ನೊಂದು ವಿಶೇಷತೆ. ಇದುವರೆಗೂ ನೂರಕ್ಕೂ ಹೆಚ್ಚು ಎತ್ತಿನ ಜೋಡಿಗಳನ್ನು ಉಳುಮೆಗಾಗಿ ನೀಡಲಾಗಿದ್ದು ಹಲವಾರು ರೈತಾಪಿ ಕುಟುಂಬಗಳು ಇದರ ಪ್ರಯೋಜನ ಪಡೆದಿವೆ.

## ನಾಟಿ ಗೋಶಾಲೆ – ಗೋ ಆಧಾರಿತ ಕಿರು ಉದ್ಯಮದ ಪ್ರಾಯೋಗಿಕ ಮಾದರಿ

ಚಿಕ್ಕ ಪ್ರದೇಶದಲ್ಲಿ ದೇಸಿ ಗೋ ಉತ್ಪನ್ನಗಳನ್ನೇ ಆಧರಿಸಿ ನಡೆಸಬಹುದಾದ ಯಶಸ್ವೀ ಉದ್ಯಮದ ಮಾದರಿಯನ್ನು ನಾಟಿ ಗೋಶಾಲೆಯಲ್ಲಿ ನೋಡಬಹುದು. ಬೆಂಗಳೂರಿನ ಯಲಹಂಕ ಸಮೀಪದ ರಾಜಾನಕುಂಟೆಯಲ್ಲಿ ಸುಮಾರು ಒಂದೂವರೆ ಎಕರೆ ವಿಸ್ತೀರ್ಣದಲ್ಲಿ ಹರಡಿಕೊಂಡಿರುವ ಈ ನಾಟಿ ಗೋಶಾಲೆಯ ಕಂಪೌಂಡಿನೊಳಗೆ ಕಾಲಿಡುತ್ತಿದ್ದಂತೇ ಗ್ರಾಮೀಣ ಪ್ರದೇಶದ ಹಟ್ಟಿಯ ಶುದ್ಧ ಸುಗಂಧ ಮೂಗಿಗೆ ಬಡಿಯುತ್ತದೆ. ವೃತ್ತಿಯಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಶ್ರೀ ಸುಧೀಂದ್ರ ಅವರು ತಾಯಿ ಪಾರ್ವತಮ್ಮನವರ ಒತ್ತಾಸೆಯ ಮೇಲೆ ಆರಂಭಿಸಿರುವ ಈ ಗೋಶಾಲೆಯಲ್ಲಿ ಗೀರ್, ಸಾಹಿವಾಲ್, ಹಳ್ಳಿಕಾರ್, ಮಲೆನಾಡ ಗಿಡ್ಡ, ವೆಚ್ಚೂರ್ ಮೊದಲಾದ ವಿವಿಧ ತಳಿಗಳ

ನಿಮ್ಮ ಊರಿನ ಅಥವಾ ನಿಮಗೆ ಪರಿಚಯವಿರುವ ಗೋಶಾಲೆಯಲ್ಲಿ ವಿಶೇಷತೆಗಳಿದ್ದರೆ, ಹೊಸತನದ ಪ್ರಯೋಗಗಳನ್ನು ಮಾಡಿದ್ದರೆ, ಸ್ವಾವಲಂಬಿಯಾಗಿದ್ದರೆ ನಮಗೆ ಬರೆದು ತಿಳಿಸಿ. ಗೋಶಾಲೆಯ ವಿಳಾಸ ಮತ್ತು ಸಂಪರ್ಕದ ಮಾಹಿತಿಗಳು ಜೊತೆಯಲ್ಲಿರಲಿ.

ನಮ್ಮ ವಿಳಾಸ: ಸಂಪಾದಕ, 'ಪುಂಗವ', ನಂ. 74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು –04

ಇ–ಮೇಲ್: editor.pungava@gmail.com
ಎಸ್‌ಎಮ್‌ಎಸ್/ವಾಟ್ಸ್‌ಆಪ್ ದೂರವಾಣಿ: 9731264009

ಭುಕ್ತ್ವಾ ತೃಣಾನಿ ಶುಷ್ಕಾನಿ ಪೀತ್ವಾ ತೋಯಂ ಜಲಾಶಯಾತ್ ।
ದುಗ್ಧಂ ದದಾತಿ ಲೋಕೇಭ್ಯಃ ಗಾವೋ ವಿಶ್ವಸ್ಯ ಮಾತರಃ ॥

ಒಣ ಹುಲ್ಲನ್ನು ತಿಂದು, ಜಲಾಶಯದ ನೀರನ್ನು ಕುಡಿದು ಲೋಕದ ಜನರಿಗೆ ಹಾಲನ್ನು ಕೊಟ್ಟು ಸಲಹುವ ಗೋವುಗಳೇ ವಿಶ್ವದ ತಾಯಂದಿರು.

ನೂರಕ್ಕೂ ಹೆಚ್ಚು ದನಕರುಗಳನ್ನು ಸಾಕಲಾಗುತ್ತಿದೆ. ದನಗಳಿಗೆ ಸ್ನಾನದ ಕೊಳ, ಬಿಸಿಲು ಕಾಯಿಸಲು ಪ್ರತ್ಯೇಕ ಪ್ರದೇಶ, ಗೋಬರ್ ಗ್ಯಾಸ್ ಘಟಕ, ಬಯೋಫೀನ್ – ಹುಲ್ಲು ಮೇವಿನ ಘಟಕ, ಜಲ ಶುದ್ಧೀಕರಣ ಘಟಕ ಇವೆಲ್ಲದರ ಜೊತೆಗೆ ಅವರು ವಾಸವಾಗಿರುವ ಮನೆ, ಕೆಲಸ ಮಾಡುವ ಆಳುಗಳ ವಸತಿ ಇವೆಲ್ಲವೂ ಕೇವಲ ಒಂದೂವರೆ ಎಕರೆ ಪ್ರದೇಶದಲ್ಲಿ ವ್ಯವಸ್ಥಿತವಾಗಿ ಹರಡಿವೆ. ಗೋಮೂತ್ರ, ಗೋಮಯಗಳಿಂದ ಘನ ಜೀವಾಮೃತ, ಅಗ್ನಿ ಅಸ್ತ್ರ, ಪಂಚಗವ್ಯ ಮೊದಲಾದ ಹಲವಾರು ಸಾವಯವ ಕೃಷಿಗೆ ಉಪಯೋಗಿಸಬಹುದಾದ ಗೊಬ್ಬರ, ಕೀಟನಾಶಕಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತದೆ. ಹಾಲು ಆಕಳಿಂದ ಸಿಗುವ ಉಪ ಉತ್ಪನ್ನ, ಗೋಮಯ ಗೋಮೂತ್ರಗಳೇ ದನದಿಂದ ಸಿಗುವ ಪ್ರಮುಖ ಉತ್ಪನ್ನಗಳು ಎನ್ನುವುದು ಅವರ ಅನಿಸಿಕೆ. ಆನ್‌ಲೈನ್ ಮೂಲಕ ಗೋ ಉತ್ಪನ್ನಗಳನ್ನು ಮಾರಾಟ ಮಾಡಲು http://www.pasuthai.com/ ಎನ್ನುವ ವೆಬ್‌ಸೈಟನ್ನು ನಿರ್ವಹಿಸುತ್ತಿದ್ದಾರೆ. ಐಎಸ್‌ಓ 2008–9001 ಮಾನ್ಯತೆ ಪಡೆದ ದೇಶದ ಮೊದಲ ಗೋಶಾಲೆ ಇದು! ಹಾಗೆಯೇ ಸಾವಯವ ಉತ್ಪನ್ನದ ಪ್ರಮಾಣಪತ್ರವೂ ಇಲ್ಲಿ ತಯಾರಾಗುವ ಉತ್ಪನ್ನಗಳಿಗಿದೆ.

## ಸುರಭೀ ಗೋಸಂರಕ್ಷಣಾ ಕೇಂದ್ರ, ಮಧುಗಿರಿ

ತುಮಕೂರು ಜಿಲ್ಲೆಯ ಮಧುಗಿರಿಯ ತಪ್ಪಲಿನ ರಮಣೀಯ ಪ್ರದೇಶ ಶ್ರೀರಾಮಕ್ಷೇತ್ರದಲ್ಲಿ 2006ರಿಂದ ಸುರಭಿ ಗೋಶಾಲೆ ಕಾರ್ಯನಿರ್ವಹಿಸುತ್ತಿದೆ. ದೇಸೀ ಗೋತಳಿಗಳನ್ನೇ ಸಾಕಿ ಸ್ವಾವಲಂಬಿಯಾದಂತಹ ಗೋಶಾಲೆಯನ್ನು ನಡೆಸಬೇಕೆಂಬ ಉದ್ದೇಶದಿಂದ ಆರಂಭವಾದ ಈ ಗೋಶಾಲೆಯ ರೂವಾರಿ ಮಧುಸೂದನ ಅವರು. ಸುರಭಿ ಗೋಶಾಲೆಯಲ್ಲಿ ಇದುವರೆಗೂ ಕಟುಕರಿಂದ ರಕ್ಷಿಸಲ್ಪಟ್ಟ ನೂರಾರು ದನಗಳು ಆಶ್ರಯ ಪಡೆದಿವೆ. ವಿವಿಧ ದೇಸೀ ತಳಿಯ ದನಗಳ ಜೊತೆಗೆ, ಲಾರಿಯಲ್ಲಿ ಕಸಾಯಿಖಾನೆಗೆ ಸಾಗಿಸುವಾಗ ಗಾಯಗೊಂಡಿರುವ, ಮುದಿಯಾದ, ಮಾನಸಿಕವಾಗಿ ಅಸ್ವಸ್ಥಗೊಂಡಿರುವ, ಅಂಗವೈಕಲ್ಯಕ್ಕೊಳಗಾಗಿರುವ ದನಕರುಗಳನ್ನೂ ಮಧುಸೂದನ ದಂಪತಿ ತಮ್ಮ ಗೋಶಾಲೆಯಲ್ಲಿ ಆರೈಕೆ ನೀಡಿ ಸಲಹುತ್ತಿದ್ದಾರೆ. ಹಾಲಿನ ಹೊರತಾಗಿ ಗೋಮೂತ್ರ, ಗೋಮಯ, ಗೊಬ್ಬರ ಮುಂತಾದ ಉಪ ಉತ್ಪನ್ನಗಳಿಂದ ಆದಾಯ ಗಳಿಸಿ ಸ್ವಾವಲಂಬೀ ಗೋಶಾಲೆಯನ್ನು ನಡೆಸಬಹುದು ಎಂದು ಅವರು ಪ್ರತಿಪಾದಿಸುತ್ತಾರೆ. ಇಲ್ಲಿ ಸುಮಾರು ಒಂಭತ್ತು ಬಗೆಯ ಗೋ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತದೆ. ಜೊತೆಗೇ, ಪುದಿನ ಅರ್ಕ, ತುಳಸಿ ಅರ್ಕ ಮೊದಲಾದ ಔಷಧೀಯ ಗುಣಗಳುಳ್ಳ ಉತ್ಪನ್ನಗಳನ್ನೂ ತಯಾರಿಸಲಾಗುತ್ತಿದೆ. ಅಲ್ಲದೇ, ಆಸಕ್ತರಿಗೆ ಈ ಕುರಿತು ತರಬೇತಿಯನ್ನೂ ನೀಡಲಾಗುತ್ತದೆ.

ಪ್ರಕೃತಿಯ ಸುಂದರ ತಾಣದಲ್ಲಿರುವ ಈ ಗೋಶಾಲೆ ಒಂದು ಪ್ರವಾಸೀ ತಾಣವಾಗಿಯೂ ಮಾರ್ಪಟ್ಟಿದೆ. ಬೃಹತ್ ಶಿಲಾಬೆಟ್ಟದ ತಪ್ಪಲಿನಲ್ಲಿರುವ ಈ ಗೋಶಾಲೆಯಲ್ಲಿ ಬೆಟ್ಟದಿಂದ ಬರುವ ಮಳೆನೀರನ್ನು ಸಂಗ್ರಹಿಸಲು ಒಂದು ಕೊಳ ನಿರ್ಮಿಸಿ ಅದರ ಮಧ್ಯದಲ್ಲಿ ಶಿವಲಿಂಗವನ್ನೂ ಪ್ರತಿಷ್ಠಾಪಿಸಲಾಗಿದೆ. ಬಂದ ಪ್ರವಾಸಿಗರು ಶಿವಲಿಂಗಕ್ಕೆ ಸ್ವತಃ ತಾವೇ ಅಭಿಷೇಕ ಮಾಡುವ ಅವಕಾಶವೂ ಇಲ್ಲಿದೆ. ಸುತ್ತಮುತ್ತಲಿನ ಶಾಲೆಗಳ ಮಕ್ಕಳು ಇಲ್ಲಿಗೆ ಬಂದು ಗೋಶಾಲೆ ಮತ್ತು ಗೋ ಉತ್ಪನ್ನಗಳ ಬಗ್ಗೆ ಮಾಹಿತಿ ಪಡೆಯುತ್ತಿರುವುದರಿಂದ ಮಕ್ಕಳಲ್ಲಿ ಗೋಸೇವೆಯ ಬಗ್ಗೆ ಶ್ರದ್ಧೆ ಹೆಚ್ಚುತ್ತಿದೆ. ಒಂದು ದಿನದ ಪಿಕ್‌ನಿಕ್‌ಗೆ ಹೇಳಿಮಾಡಿಸಿದ ಈ ಸ್ಥಳ, ಬೆಟ್ಟದ ತಪ್ಪಲಿನಲ್ಲೇ ಇರುವುದರಿಂದ ಚಾರಣಿಗರಿಗೂ ಅಚ್ಚುಮೆಚ್ಚಿನ ತಾಣವಾಗಿದೆ.

# ಬ್ರಹ್ಮಪುತ್ರದ ಇಕ್ಕೆಲಗಳಲ್ಲಿ ಸಂಸ್ಕೃತದ ಕಲರವ

ಬ್ರಹ್ಮಪುತ್ರ ಸುಮಾರು 1800 ಮೈಲಿಗಳಷ್ಟು ಉದ್ದವನ್ನೂ, 50 ಮೈಲಿಗಳಷ್ಟು ಅಗಲವನ್ನೂ, ಸುಮಾರು 380 ಅಡಿ ಆಳವನ್ನು ಹೊಂದಿರುವ ಜಗತ್ತಿನ ಅತ್ಯಂತ ವಿಶಾಲನದಿಸಮೂಹಗಳಲ್ಲಿ ಒಂದಾಗಿದೆ. ಉಳಿದೆಲ್ಲವನ್ನು ನದಿಗಳೆಂದು ಸ್ತ್ರೀಲಿಂಗದಲ್ಲಿ ಸಂಬೋಧಿಸುತ್ತೇವೆ. ಆದರೆ ಪೂರ್ವೋತ್ತರ ಮಾತ್ರ ಪುಲ್ಲಿಂಗದಲ್ಲಿ ಸಂಬೋಧಿಸಲ್ಪಡುವ ಏಕಮಾತ್ರ ನದಿಯಾಗಿದೆ. ಅಸ್ಸಾಂ ಮತ್ತು ಅರುಣಾಚಲ ಪ್ರದೇಶ ರಾಜ್ಯಗಳಿಗೆ ನೀರುಣಿಸಿ ಸಮೃದ್ಧಗೊಳಿಸುತ್ತಿರುವ ಭಾರತದ ವಿಶಾಲವಾದ ಮತ್ತು ಉದ್ದವಾದ ಬ್ರಹ್ಮಪುತ್ರ ಪೂರ್ವೋತ್ತರ ಭಾರತದ ಜೀವನಾಡಿಯಾಗಿದೆ. ಪರಶುರಾಮನ ಸೃಷ್ಟಿಯಾದ ಈ ಭಾಗದಲ್ಲಿ ಪ್ರಾಕೃತಿಕ ಸಂಪತ್ತು ಹೇರಳವಾಗಿದೆ. ಆದರೆ ದೇಶವಿರೋಧಿ ಸಮಸ್ಯೆಗಳು ಮಾತ್ರ ಜನಜೀವನವನ್ನು ದುಃಸ್ತರವಾಗಿ ಮಾಡಿವೆ.

ಅಸ್ಸಾಂನ ಮಾಜೋಳಿ ದ್ವೀಪ – ಇದು ಬ್ರಹ್ಮಪುತ್ರದ ಮಧ್ಯದಲ್ಲಿರುವ ಏಷ್ಯಾಖಂಡದ ಅತ್ಯಂತ ದೊಡ್ಡ ನದೀದ್ವೀಪ. ಅತ್ಯಂತ ಚಿಕ್ಕ ದ್ವೀಪಪ್ರದೇಶವನ್ನೂ ಬ್ರಹ್ಮಪುತ್ರವೇ ಹೊಂದಿರುವುದು ಇನ್ನೊಂದು ವಿಶೇಷ. ಮಾಜೋಳಿ ದ್ವೀಪದ ವಿಸ್ತೀರ್ಣ ಸುಮಾರು 1200 ಕಿ.ಮೀ. ಜನಸಂಖ್ಯೆ 1.5 ಲಕ್ಷ. ದ್ವೀಪದಲ್ಲಿರುವ ಶೇ. 80 ರಷ್ಟು ಮನೆಗಳು ಪರಿಸರಸ್ನೇಹಿ ಮನೆಗಳು. ಅಲ್ಲಿಯೇ ಸಿಗುವ ಕಟ್ಟಿಗೆ ಬೊಂಬುಗಳಿಂದ ನಿರ್ಮಿಸಿದವುಗಳು. ಬ್ರಹ್ಮಪುತ್ರದ ನೀರು ಭೂತಲದಲ್ಲಿ ಯಾವಾಗ ಬೇಕಾದರೂ ಹರಿದು ಬರುವ ಸಂಭವವಿರುವುದರಿಂದ ಸಾಮಾನ್ಯವಾಗಿ ಎಲ್ಲ ಮನೆಗಳೂ ಭೂಮಿಯಿಂದ 15 ಅಡಿ ಎತ್ತರದಲ್ಲಿಯೇ ಕಟ್ಟಲ್ಪಟ್ಟಿವೆ. ಮಾಜೋಳಿಯಲ್ಲಿ 83ಕ್ಕೂ ಹೆಚ್ಚಿನ ಸತ್ರ(ಮಠ)ಗಳಿವೆ. ಅದು ಸಾಧು ಸಂನ್ಯಾಸಿಗಳ ನಿವಾಸಸ್ಥಾನ. ಉಲ್ಲೇಖಿಸಬಹುದಾದ ಪ್ರಮುಖ ಸತ್ರಗಳಲ್ಲಿ ದಕ್ಷಿಣಪಾಠ ಸತ್ರ ಮತ್ತು ಉತ್ತರಪಾಠ ಸತ್ರಗಳು ಪ್ರಮುಖವಾದವುಗಳು. ಭಗವಾನ್ ಶಂಕರದೇವರು ಇವುಗಳ ಸ್ಥಾಪನೆಗೆ ಕಾರಣೀಕರ್ತರು. ಭಗವಾನ್ ಶಂಕರದೇವರು 12 ವರ್ಷಗಳ ಕಾಲ ಕಾಲ್ನಡಿಗೆಯಲ್ಲಿ ಭಾರತದ ಎಲ್ಲೆಡೆ ಸಂಚರಿಸಿ ವೈಷ್ಣವ ಸಂಪ್ರದಾಯವನ್ನು ಪ್ರಚುರಪಡಿಸಿದ ನಮ್ಮ ಪರಂಪರೆಯ ಋಷಿವರೇಣ್ಯರು. 350 ವರ್ಷಗಳ ಹಿಂದೆ ಇಲ್ಲಿಯ ಅನೇಕ ಸತ್ರಗಳಲ್ಲಿ ವೇದ, ಉಪನಿಷತ್, ದರ್ಶನ ಮತ್ತು ಸಂಸ್ಕೃತದ ಪಾಠಪ್ರವಚನಗಳು ನಡೆಯುತ್ತಿದ್ದ ಉಲ್ಲೇಖಗಳೂ ಸಿಗುತ್ತವೆ. ಕಾಲಾಂತರದಲ್ಲಿ ಸಾಮಾಜಿಕ ಬದಲಾವಣೆಯ ಕಾರಣದಿಂದ ಪರಂಪರೆಯ ಕೊಂಡಿ ಕಳಚಿಕೊಂಡಿತು. ಇದೀಗ ಮತ್ತೆ ಆ ಕೊಂಡಿಯನ್ನು ಜೋಡಿಸುವ ಕಾರ್ಯದಲ್ಲಿ ಅನೇಕ ಸಾಮಾಜಿಕ ಸಂಘಟನೆಗಳು ಶ್ರಮಿಸುತ್ತಿವೆ. ಇವುಗಳಲ್ಲಿ ಮುಖ್ಯವಾಗಿ ಕಳೆದ 35 ವರ್ಷಗಳ ಹಿಂದೆ ಕರ್ನಾಟಕದಲ್ಲಿ ಆರೆಸ್ಸೆಸ್ ಪ್ರೇರಣೆಯಿಂದ ಪ್ರಾರಂಭವಾದ ಸಂಸ್ಕೃತ ಪುನರುತ್ಥಾನ ಕಾರ್ಯದ ಸುಗಂಧ ಈಶಾನ್ಯ ರಾಜ್ಯದೆಲ್ಲೆಡೆ ಪಸರಿಸಲು ಪ್ರಾರಂಭಿಸಿದೆ.

ಮಾಜೋಳದಲ್ಲಿನ ಅನೇಕ ಗುರುಕುಲಗಳಲ್ಲಿ ವಿಭಿನ್ನ ಜಾತಿಯವರು ವೇದ, ಕಲಾ, ನೃತ್ಯ, ಸಂಸ್ಕೃತವನ್ನು ಕಲಿಯುತ್ತಿದ್ದಾರೆ. ಇಲ್ಲಿ ಇತ್ತೀಚೆಗೆ ನಡೆದ ಎರಡು ದಿನಗಳ ಸಂಸ್ಕೃತ ಸಮ್ಮೇಳನ ಈಶಾನ್ಯ ಭಾರತದ ಜನರಲ್ಲಿ ಹೊಸ ಚೈತನ್ಯವನ್ನು ಮೂಡಿಸಿತು. ಅಸ್ಸಾಂ, ಅರುಣಾಚಲ, ಮಿಜೋರಾಂ, ಮಣಿಪುರ, ಮೇಘಾಲಯ ರಾಜ್ಯಗಳ ದೂರ ದೂರದ ಹಳ್ಳಿಗಳಿಂದ ಬಂದಿದ್ದ 2,000ಕ್ಕೂ ಹೆಚ್ಚಿನ ಜನರು ಭಾಗವಹಿಸಿದ್ದು ಅಲ್ಲಿಯ ಜನರಲ್ಲಿ ಸಂಸ್ಕೃತ ಕಲಿಕೆಯ ಬಗ್ಗೆ ಇರುವ ಆಸಕ್ತಿಯನ್ನು ತೋರಿಸುತ್ತಿತ್ತು. ಈಶಾನ್ಯ ರಾಜ್ಯದ ನಾಗಾ, ಕುಕಿ, ಕಾರ್ಭಿ ಜನಜಾತಿಗಳ ಜನರು ವಿಶೇಷ ಆಸಕ್ತಿಯಿಂದ ಸಂಸ್ಕೃತವನ್ನು ಕಲಿಯುತ್ತಿದ್ದಾರೆ. ಅನೇಕರು ಪೂರ್ಣ ಸಮಯವನ್ನು ನೀಡಿ ಸಂಸ್ಕೃತದ ಸೇವಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಂತಹವರಲ್ಲಿ ಲಾಗ್ ವಿಸೋ ಬೇಟಿ ಎನ್ನುವ ಆದಿವಾಸಿ ಮಹಿಳಾ ಕಾರ್ಯಕರ್ತೆ ಅನೇಕ ವರ್ಷಗಳ ಕಾಲ ಭಯೋತ್ಪಾದನೆಯಿಂದ ತತ್ತರಿಸಿ ಹೋಗಿರುವ ದುರ್ಗಮವಾದ ಕಾಂಗ್ರಾ ತುಂಬ್ರಿ ಪ್ರದೇಶದಲ್ಲಿ ಸಂಸ್ಕೃತದ ಮೂಲಕ ಸಮಾಜ ಪರಿವರ್ತನೆಯ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿರುವಳು. ಆ ಭಾಗದ ನೂರಾರು ಜನರಿಗೆ ಸಂಸ್ಕೃತದಲ್ಲಿ ಮಾತನಾಡಲು ಕಲಿಸಿದ್ದಾಳೆ. ನಕ್ಸಲ್ ಸಂಘಟನೆಯ ಜೊತೆಗೆ ಗುರುತಿಸಿಕೊಂಡಿರುವ ಅನೇಕರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ತರುವ ಪ್ರಯತ್ನವನ್ನು ಮಾಡಿದ್ದಾಳೆ. ಈ ರೀತಿ 14ಕ್ಕೂ ಹೆಚ್ಚಿನ ಪೂರ್ಣಕಾಲಿಕ ಕಾರ್ಯಕರ್ತರು ಈಶಾನ್ಯ ಭಾರತದ ಸಿಲ್‌ಚರ್, ಭರಾಖ್‌ವ್ಯಾಲಿ, ಚಾರ್ ಹಜಾರೆ ಮುಂತಾದ ಪ್ರದೇಶಗಳಲ್ಲಿ ಸಂಸ್ಕೃತ ಕಲಿಸುವ ಮೂಲಕ ಸಮಾಜ ಪರಿವರ್ತನೆಯ ಕಾರ್ಯದಲ್ಲಿ ನಿರತರಾಗಿದ್ದಾರೆ. ಈ ಪ್ರದೇಶಗಳಲ್ಲಿ ಹೆಚ್ಚಿನ ದಿನಗಳಲ್ಲಿ ಒಂದು ಹೊತ್ತಿನ ಆಹಾರ ಸಿಗುವುದು ಕೂಡ ಕಷ್ಟಕರ.

ಈಶಾನ್ಯ ರಾಜ್ಯಗಳಲ್ಲಿ ರಾಷ್ಟ್ರವಿಕಾಸದ, ಭಾಷೆ ಮತ್ತು ಸಂಸ್ಕೃತಿಯ ಸಂರಕ್ಷಣೆಯ ಕಾರ್ಯಗಳು ನಿರಂತರವಾಗಿ ನಡೆಯುತ್ತಿವೆ. ಸಾವಿರಾರು ಕಾರ್ಯಕರ್ತರು ಹಗಲಿರುಳು ತನು, ಮನ, ಧನವನ್ನು ಸಮರ್ಪಿಸಿ ಗಂಧದಂತೆ ತಮ್ಮ ನೆತ್ತರನ್ನು ಬಸಿಯುತ್ತಿದ್ದಾರೆ. ಆ ಭಾಗದಲ್ಲಿ ಸಂಸ್ಕೃತ ಕಲಿಕೆಗೆ ಸಿಗುತ್ತಿರುವ ಜನಮನ್ನಣೆಯನ್ನು ನೋಡಿ ಗೌಹಾಟಿಯಲ್ಲಿರುವ ಕಾಮಾಕ್ಯ ಮಂದಿರದಲ್ಲಿ ನಿರಂತರ ಸಂಸ್ಕೃತ ತರಗತಿಗಳನ್ನು ನಡೆಸಲು ಮಂದಿರ ವ್ಯವಸ್ಥಾಪಕ ಸಮಿತಿ ವಿಶೇಷ ಯೋಜನೆಯನ್ನು ರೂಪಿಸಿದೆ. ಊಟ, ವಸತಿ ಮತ್ತು ವೇತನವನ್ನು ನೀಡಿ ಶಿಕ್ಷಕರೊಬ್ಬರನ್ನು ನಿಯುಕ್ತಿ ಮಾಡಿದೆ. ಪರಿಣಾಮವಾಗಿ ಪ್ರತಿದಿನ ನೂರಾರು ಜನರು ಈ ಯೋಜನೆಯ ಅಡಿಯಲ್ಲಿ ದೇವಭಾಷೆಯನ್ನು ಕಲಿಯುತ್ತಿದ್ದಾರೆ.

ಕೃಪೆ: ವಿಜಯವಾಣಿ

# ಇಮ್ತಿಯಾಜ್ ಅಲಿ ಅವರಿಗೆ ಪ್ರೊ॥ ಯಶವಂತ್ ರಾವ್ ಕೇಳ್ಕರ್ ಪುರಸ್ಕಾರ

ದೇಶದ ಮುಂಚೂಣಿ ವಿದ್ಯಾರ್ಥಿ ಸಂಘಟನೆ ಎಬಿವಿಪಿ ನೀಡುವ ಪ್ರತಿಷ್ಠಿತ 'ಪ್ರೊ॥ ಯಶವಂತ್ ರಾವ್ ಕೇಳ್ಕರ್ ಪುರಸ್ಕಾರ' ಈ ವರ್ಷ ಪರಿಸರ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸೇವೆ ಮಾಡುತ್ತಿರುವ ಇಮ್ತಿಯಾಜ್ ಅಲಿ ಅವರಿಗೆ ದೊರೆತಿದೆ. ಒಡಿಶಾದ ಭುವನೇಶ್ವರದಲ್ಲಿ 29ನೇ ನವೆಂಬರ್ 2015ರಂದು ನಡೆಯಲಿರುವ ಎಬಿವಿಪಿಯ (ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್) ರಾಷ್ಟ್ರೀಯ ಅಧಿವೇಶನದಲ್ಲಿ ಈ ಪ್ರಶಸ್ತಿಯನ್ನು ಕೊಡಲಾಗುತ್ತದೆ.

ಸಾರ್ಥಕ್ ಸಾಮುದಾಯಿಕ್ ವಿಕಾಸ್ ಏವಂ ಜನ ಕಲ್ಯಾಣ್ ಸಂಸ್ಥಾನ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ಅದರ ಮೂಲಕ ಘನ ತ್ಯಾಜ್ಯ ನಿರ್ವಹಣೆಯಲ್ಲಿ ಹೊಸ ಪ್ರಯತ್ನಗಳನ್ನು ಮಾಡುವ ಮೂಲಕ ಪೌರ ಕಾರ್ಮಿಕರು ಮತ್ತು ಪ್ಲಾಸ್ಟಿಕ್ ಪುನರ್ಬಳಕೆ ಕ್ಷೇತ್ರದಲ್ಲಿ ಕೆಲಸ ಮಾಡುವ ಹಲವಾರು ಕಾರ್ಮಿಕರ ಜೀವನದಲ್ಲಿ ಪರಿವರ್ತನೆಗೆ ಕಾರಣರಾದ ಇವರ ಕೊಡುಗೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಆಯ್ಕೆ ಸಮಿತಿ ತಿಳಿಸಿದೆ. ದೀನ್ ದಯಾಳ್ ಶೋಧ ಸಂಸ್ಥಾನದ ಮೂಲಕ ಸಾಮಾಜಿಕ ಕ್ರಾಂತಿಯನ್ನು ಮಾಡಿದ ದಿ. ನಾನಾಜಿ ದೇಶಮುಖ್ ಅವರಿಂದ ಪ್ರೇರಣೆ ಪಡೆದ ಇಮ್ತಿಯಾಜ್ ಅವರು ಅದೇ ಹಾದಿಯಲ್ಲಿ ಮುನ್ನಡೆಯುತ್ತಿದ್ದಾರೆ.


ಇಮ್ತಿಯಾಜ್ ಅಲಿ

ಪ್ರೊ. ಯಶವಂತ್ ರಾವ್ ಕೇಳ್ಕರ್ ಅವರು ಎಬಿವಿಪಿಯನ್ನು ರೂಪಿಸಿದ ಶಿಲ್ಪಿಗಳಲ್ಲೊಬ್ಬರು. ಸಂಘಟನೆಗೆ ಭದ್ರ ಅಡಿಪಾಯ ಹಾಕುವಲ್ಲಿ ಅವರ ಚಿಂತನೆ, ಕಾರ್ಯಗಳು ಅಮೂಲ್ಯವಾದ ಕೊಡುಗೆ ನೀಡಿವೆ. ಅವರ ನೆನಪಿನಲ್ಲಿ ಎಬಿವಿಪಿ ಪ್ರತಿವರ್ಷ ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡಿದ ಸಾಧಕರೊಬ್ಬರಿಗೆ ಈ ಪ್ರಶಸ್ತಿ ನೀಡುತ್ತದೆ. ಈ ಪ್ರಶಸ್ತಿಯು ಪ್ರಶಸ್ತಿ ಪತ್ರ ಮತ್ತು ರೂ. 50,000 ನಗದನ್ನು ಒಳಗೊಂಡಿರುತ್ತದೆ. ಸಾಧಕರನ್ನು ಪ್ರಶಸ್ತಿಯೊಂದಿಗೆ ಗೌರವಿಸಿ, ಅವರ ಅನುಕರಣೀಯ ಕಾರ್ಯವನ್ನು ವಿದ್ಯಾರ್ಥಿಗಳ ಮುಂದಿಡುವ ಮತ್ತು ವಿದ್ಯಾರ್ಥಿಗಳನ್ನು ಸಾಮಾಜಿಕ ಕಾರ್ಯದಲ್ಲಿ ತೊಡಗಲು ಪ್ರೇರೇಪಿಸುವ ಉದ್ದೇಶ ಸಂಘಟನೆಯದ್ದು.

# ಕಲ್ಲು ಬಂಡೆ ಜಾಗದಲ್ಲಿ ಕಾಡು ಸೃಷ್ಟಿ

ನೆಲದ ಮಾತು

ಇದು 25 ವರ್ಷಗಳ ಹಿಂದೆ ಬಂಜರು ಭೂಮಿ. ಕೃಷಿ ಮಾಡುವುದು ದೂರದ ಮಾತು. ಮೇವು ಬೆಳೆಯಲೂ ಈ ಭೂಮಿಯಲ್ಲಿ ಸಾಧ್ಯವಿರಲಿಲ್ಲ. ಅದೇ ಭೂಮಿಯಲ್ಲಿ ಈಗ ಹಸಿರು ಉಕ್ಕಿದೆ. ಸಾಗುವಾನಿ, ಗಂಧ, ಬೀಟೆ ಮರ ಸೇರಿದಂತೆ ವಿವಿಧ ಬೆಳೆಗಳು ಇಲ್ಲಿ ತುಂಬಿ ಹೋಗಿದ್ದು ವೈವಿಧ್ಯ ಜೀವಸಂಕುಲಗಳ ತಾಣವೂ ಆಗಿದೆ.

ಈ ಜಮೀನು ಇರುವುದು ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಅಂಡಗಿ ಗ್ರಾಮದಲ್ಲಿ. ಇಂಥ ಸಾಧನೆ ಮಾಡಿರುವುದು ಕರಿಬಸಪ್ಪ ಗೌಡ. ದೆಹಲಿ ಶಾಂತಿಕೂಟ ಆಶ್ರಮದಲ್ಲಿ ಸರ್ಕಾರ 26 ವರ್ಷಗಳ ಹಿಂದೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಂತರ್ಜಲ ಮತ್ತು ಅರಣ್ಯೀಕರಣ ಮಾಹಿತಿಯನ್ನು ಪಡೆದು ಜಮೀನಿನಲ್ಲಿ ಅಳವಡಿಸಿಕೊಂಡಿರುವ ಕಾರಣ ಇಂದು ಕಲ್ಲಿನಿಂದ ತುಂಬಿದ ಭೂಮಿಯಲ್ಲಿ ವಿವಿಧ ಗಿಡ ಮರಗಳು ಬೆಳೆದು ನಿಂತಿವೆ.

ಕರಿಬಸಪ್ಪ ಅವರು ತಮ್ಮ 12 ಎಕರೆ ಭೂಮಿಯಲ್ಲಿ ತೋಟಗಾರಿಕೆ ಬೆಳೆಗಳಾದ ಅಡಿಕೆ, ಚಿಕ್ಕು, ಮಾವು, ತೆಂಗು, ಗಂಧ, ಸಾಗುವಾನಿ ಮರಗಳು, ಬಾಳೆ ಮತ್ತು ಕಾಡು ಜಾತಿ ಮರಗಳಾದ ಹೊನ್ನೆ, ಶಿವನಿ, ಬೀಟೆ ಮರಗಳನ್ನು ಬೆಳೆಸಿದ್ದಾರೆ. ಇವೆಲ್ಲವನ್ನೂ ಹನಿನೀರಿನಲ್ಲಿಯೇ ಬೆಳೆದಿರುವುದು ವಿಶೇಷ. ಈ ತೋಟದಲ್ಲಿ ನಾಲ್ಕು ಇಂಗು ಗುಂಡಿಗಳಿವೆ. ಎಂಟು ವರ್ಷಗಳ ಹಿಂದೆ ಬೋರ್‌ವೆಲ್‌ನಲ್ಲಿ ಉತ್ತಮವಾದ ನೀರು ಬಿದ್ದ ಮೇಲೆ ಅಡಿಕೆ ಬೆಳೆ ಬೆಳೆಯುತ್ತಿದ್ದಾರೆ.

**ಕೃಷಿ ವಿಧಾನ ಹೀಗಿದೆ :** ಆರು ಅಡಿ ಅಂತರದಲ್ಲಿ ಬದು ನಿರ್ಮಿಸಿ ಸಾಗುವಾನಿ ಗಿಡಗಳನ್ನು ನೆಟ್ಟಿದ್ದಾರೆ. ಸಾಲಿನಿಂದ ಸಾಲಿಗೆ 25 ಅಡಿ ಅಂತರವಿದೆ. ಅದರ ಮಧ್ಯದಲ್ಲಿ ಅಡಿಕೆ, ಮಾವು, ತೆಂಗು, ಗಂಧ, ಬಾಳೆ, ಚಿಕ್ಕು ಮತ್ತು ಕಾಡು ಜಾತಿಯ ಗಿಡಗಳನ್ನು ನೆಟ್ಟಿದ್ದಾರೆ. ಎರಡು ದೊಡ್ಡ ಟ್ಯಾಂಕರ್ ನಿರ್ಮಿಸಿದ್ದು, ಈ ಟ್ಯಾಂಕರ್‌ಗಳಿಗೆ ಕೊಟ್ಟಿಗೆಯಿಂದ ನೇರವಾಗಿ ಗೋಮೂತ್ರ ಹೋಗುವ ವ್ಯವಸ್ಥೆ ಇದೆ. ಬಯೋಟ್ಯಾಂಕರ್‌ನಿಂದ ತಯಾರಿಸುವ ರಸಸಾರ ಘಟಕವನ್ನು ಬೋರ್‌ವೆಲ್‌ನಿಂದ ಬರುವ ನೀರಿಗೆ ಸೇರಿಸಿ ಎಲ್ಲಾ ಬೆಳೆಗೂ ನೀಡಲಾಗುತ್ತದೆ. ಎರೆಹುಳು ತೊಟ್ಟಿಯಲ್ಲಿ ಗೊಬ್ಬರ ತಯಾರಿಸಲಾಗುತ್ತದೆ.

**ಸಾವಯವ ಕೃಷಿ :** ಪ್ರಕೃತಿಯಲ್ಲಿ ಲಭಿಸುವ ಜೀವಮೂಲ ದ್ರವ್ಯಗಳ ನೆರವಿನಿಂದ ಕೃಷಿ ಮಾಡುವುದರಿಂದ ಒಳ್ಳೆಯ ಫಸಲು ಸಾಧ್ಯ ಎನ್ನುವುದು ಅವರ ಮಾತು. 'ಹಸಿಕಸ, ಎಲೆಗಳು, ಸಗಣಿ, ಗೋಮೂತ್ರ, ಹುಳಿ ಮಜ್ಜಿಗೆ ಕೊಳೆಸಿ, ಬೆಳೆಗೆ ಕೊಡಬೇಕು. ಇದು ಮಣ್ಣಿನ ಜೀವ ಸಂಕುಲವನ್ನು ಬೆಳೆಸುತ್ತದೆ. ಆ ಜೀವಿಗಳು ಸಸ್ಯಕ್ಕೆ ಬೇಕಾದ ಜೈವಿಕ ಅಂಶವನ್ನು ಒದಗಿಸುತ್ತವೆ. ಮಣ್ಣಿನ ಜೀವಾಣುಗಳನ್ನು ಎಷ್ಟು ಬೆಳೆಸುತ್ತೇವೆಯೋ ಅಷ್ಟು ಮಣ್ಣಿನ ಫಲವತ್ತತೆ ಹೆಚ್ಚುತ್ತದೆ' ಎನ್ನುತ್ತಾರೆ ಕರಿಬಸಪ್ಪ ಗೌಡ.

ತೋಟಗಾರಿಕಾ ಬೆಳೆಯೊಂದಿಗೆ ದೀರ್ಘಾವಧಿ ಬೆಳೆಗಳನ್ನೂ ಬೆಳೆಯುತ್ತಿದ್ದಾರೆ. ಚಿಕ್ಕುವಿನಿಂದ ವರ್ಷಕ್ಕೆ ಮೂರು ಲಕ್ಷ, ಮಾವಿನಿಂದ 50 ಸಾವಿರ ರೂಪಾಯಿ ಲಾಭ ಸದ್ಯ ಪಡೆದಿದ್ದಾರೆ. ಇಂದಿನ ಮಾರುಕಟ್ಟೆ ಬೆಲೆಗೆ ಒಂದು ಸಾಗುವಾನಿ ಮರಕ್ಕೆ 1–20ಸಾವಿರ ಬೆಲೆ ಇದೆ ಎನ್ನುತ್ತಾರೆ ಅವರು. ಅರಣ್ಯೀಕರಣ ಮಿಶ್ರ ಕೃಷಿಯಲ್ಲಿ ಅಧಿಕ ಲಾಭ ಗಳಿಸಬಹುದು. ಒಂದೇ ಬೆಳೆಯನ್ನು ನಿರಂತರವಾಗಿ ಬೆಳೆಯುತ್ತಿದ್ದರೆ, ಆದಾಯ ಕಡಿಮೆಯಾಗಬಹುದು. ಬಹು ಬೆಳೆಯನ್ನು ಬೆಳೆಯುವುದು ಉತ್ತಮ.

ಸಾವಯವ ಕೃಷಿಯನ್ನು ಮಾಡಿದರೆ ಲಾಭ ಗಳಿಸಬಹುದು ಎಂಬುದಕ್ಕೆ ಇವರೇ ಸಾಕ್ಷಿ. 'ಕೃಷಿ ಮಾಡುವ ಅವಕಾಶವಿದ್ದರೆ, ಮತ್ತೊಬ್ಬರ ಕೈಕೆಳಗೆ ಕೆಲಸ ಮಾಡುವ ಬದಲು ನಾವೇ ನಾಲ್ಕಾರು ಜನರಿಗೆ ಕೆಲಸ ಕೊಡಬಹುದು' ಎನ್ನುವ ಕರಿಬಸಪ್ಪನವರು, ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದ್ದಾರೆ. ಮಕ್ಕಳೂ ಕೆಲಸಕ್ಕೆ ಸೇರದೇ, ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ಸಾಧನೆಗೆ 2006ರಲ್ಲಿ 'ಶ್ರೇಷ್ಠ ಕೃಷಿಕ ಪ್ರಶಸ್ತಿ' ಲಭಿಸಿದೆ. ಸಂಪರ್ಕ ಸಂಖ್ಯೆ: 9449453149 (ಸಂಜೆ ವೇಳೆ).

ಕೃಪೆ: ಪ್ರಜಾವಾಣಿ

## ರಾಷ್ಟ್ರ ಸೇವಿಕಾ ಸಮಿತಿ ಪ್ರೇರಿತ ಸುಕೃಪಾ ಟ್ರಸ್ಟ್‌ನಿಂದ ಬಿಬಿಎಂಪಿ ಮಹಿಳಾ ಸದಸ್ಯೆಯರಿಗೆ ಸನ್ಮಾನ

ರಾಷ್ಟ್ರ ಸೇವಿಕಾ ಸಮಿತಿ (ಸಾಮಾಜಿಕ ಕ್ಷೇತ್ರದ ಮಹಿಳಾ ಸಂಘಟನೆ) ಯಿಂದ ಪ್ರೇರಣೆ ಪಡೆದು ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆ ಸುಕೃಪಾ ಟ್ರಸ್ಟ್ ಇತ್ತೀಚೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಜಯಗಳಿಸಿದ ಮಹಿಳಾ ಸದಸ್ಯೆಯರನ್ನು ಸನ್ಮಾನಿಸಿತು.

ಶಿಶು ಮಂದಿರ, ಹೊಲಿಗೆ ತರಬೇತಿ ಕೇಂದ್ರ, ಯೋಗ ತರಬೇತಿ, ಆಪ್ತಸಲಹೆ ಮೊದಲಾದ ಸೇವಾ ಚಟುವಟಿಕೆಗಳನ್ನು ನಡೆಸುತ್ತಿರುವ ಸುಕೃಪಾ ಟ್ರಸ್ಟ್ ತಮ್ಮನ್ನು ಗುರುತಿಸಿ ಸನ್ಮಾನಿಸಿದ್ದಕ್ಕೆ ಹರ್ಷ ವ್ಯಕ್ತಪಡಿಸಿದ ಬಿಬಿಎಂಪಿ ಸದಸ್ಯೆಯರು ಸಾಮಾಜಿಕ ಕಾರ್ಯದಲ್ಲಿ ಸುಕೃಪಾ ಟ್ರಸ್ಟ್‌ನೊಂದಿಗೆ ತಾವೂ ಕೆಲಸ ಮಾಡುವ ಇಂಗಿತ ವ್ಯಕ್ತಪಡಿಸಿದರು.

**ಸಂಪಾದಕೀಯ ಸಹಕಾರ** ಸತ್ಯನಾರಾಯಣ ಶಾನಭಾಗ್, ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

## ಮೌಂಟೈನ್ ಮ್ಯಾನ್ : ಮಹಾರಾಷ್ಟ್ರದ ರಾಜಾರಾಮ್ ಭಾಪ್ಕರ್



ಮಹಾರಾಷ್ಟ್ರದ ಅಹಮದ್ ನಗರ್ ಜಿಲ್ಲೆಯ ಗುಂಡೆಗಾವ್ ಹಳ್ಳಿಯ ನಿವೃತ್ತ ಅಧ್ಯಾಪಕ, 84 ವರ್ಷದ ರಾಜಾರಾಮ್ ಭಾಪ್ಕರ್, ತಮ್ಮ ಸಾಮಾಜಿಕ ಕಳಕಳಿ ಹಾಗೂ ಸ್ವ ಪ್ರಯತ್ನದಿಂದ ಏಳು ಪರ್ವತಗಳ ನಡುವೆ ಹಾದು ಹೋಗುವ, 40 ಕಿ. ಮೀ. ಉದ್ದದ ರಸ್ತೆ ನಿರ್ಮಿಸಿದ್ದಾರೆ. ಬಿಹಾರದ ಪ್ರಖ್ಯಾತ ದಶರಥ್ ಮಾಂಝಿಯವರಂತಹ ಇನ್ನೊಬ್ಬ "ಮೌಂಟೈನ್ ಮ್ಯಾನ್" ಎಂದೇ ಇವರು ಗುರುತಿಸಲ್ಪಟ್ಟಿದ್ದಾರೆ. ಸ್ವಾತಂತ್ರ್ಯ ಬಂದ ದಿನಗಳಲ್ಲಿ ಗುಂಡೆಗಾವ್‌ನಿಂದ ಅಕ್ಕಪಕ್ಕದ ಹಳ್ಳಿಗಳನ್ನು ಸಂಪರ್ಕಿಸುವ ಕಾಲು ದಾರಿ ಕೂಡಾ ಇರಲಿಲ್ಲವಾದರೂ, ಕಳೆದ 57 ವರ್ಷಗಳಲ್ಲಿ ರಾಜಾರಾಮ್ ಭಾಪ್ಕರ್‌ರವರು ತಮ್ಮ ಭಗೀರಥ ಪ್ರಯತ್ನದಿಂದ 7 ಗುಡ್ಡಗಳನ್ನು ಕಡಿದು ಈ ರಸ್ತೆ ನಿರ್ಮಿಸಿದ್ದಾರೆ. ರಸ್ತೆ ನಿರ್ಮಿಸಲು ಸರ್ಕಾರಿ ಸಹಾಯಕ್ಕಾಗಿ ಅಂಗಲಾಚಿದರೂ ಕೆಲಸ ಆಗದಿದ್ದುದನ್ನು ನೋಡಿ ತಾವೇ ಈ ಕೆಲಸ ಕೈಗೆತ್ತಿಕೊಂಡರು ರಾಜಾರಾಮ್. ಕೊಲೆಗಾಂವ್‌ನಿಂದ ದುಲೆಗಾಂವ್‌ಗೆ ನಡುವಿನ 29 ಕೀ. ಮೀ ದೂರ ಈ ರಸ್ತೆಯಿಂದಾಗಿ ಈಗ ಬರೀ 10 ಕಿ.ಮೀ.ಗೆ ಇಳಿದಿದೆ. ಈ ರಸ್ತೆ ನಿರ್ಮಾಣಕ್ಕೆ ತಾವು ಸ್ವತಃ ಹಾರೆ ಗುದ್ದಲಿ ಹಿಡಿದು ಕೆಲಸ ಮಾಡಿದ್ದಲ್ಲದೇ ತಮ್ಮ ಜೊತೆ ಸೇರಿದ ಗ್ರಾಮಸ್ಥರಿಗೆ ತಮ್ಮ ಜೇಬಿನಿಂದಲೇ ಸಂಬಳ ನೀಡಿ ತಮ್ಮ ಪಿಂಚಣಿಯ ಸಂಪೂರ್ಣ ಹಣವನ್ನು ಇದಕ್ಕೆ ಬಳಸಿದ್ದಾರೆ.

## ಸಾಲುದ್ದದ ಸುದ್ದಿಗಳು



ಹರಿಯಾಣ ರಾಜ್ಯದ ಮೇವಾಟ್ ಎಂಬಲ್ಲಿ ಮುಸ್ಲಿಂ ರಾಷ್ಟ್ರೀಯ ಮಂಚ್ ವತಿಯಿಂದ ಹಸು ಸಾಕಿಕೊಂಡಿರುವ 74 ಮುಸಲ್ಮಾನರನ್ನು ಸನ್ಮಾನಿಸಲಾಯಿತು. ಇತ್ತೀಚೆಗೆ ನಡೆದ ಮುಸ್ಲಿಮ್ ಗೋಪಾಲಕ ಸಮ್ಮೇಳನದಲ್ಲಿ ಸನ್ಮಾನ ಸ್ವೀಕರಿಸಿದ ಮುಸ್ಲಿಮರೆಲ್ಲರೂ ಗೋಹತ್ಯೆ ವಿರುದ್ಧ ಕಟಿಬದ್ಧರಾಗುತ್ತೇವೆಂದು ಪ್ರತಿಜ್ಞೆ ಸ್ವೀಕರಿಸಿದರು. ಮೇವಾಟ್ ಗೋ ಹತ್ಯೆಯ ವಿಷಯದಲ್ಲಿ ಕುಖ್ಯಾತಿಯನ್ನು ಪಡೆದಿದೆ. ಈ ಕುಖ್ಯಾತಿಯಿಂದ ಹೊರಬಂದು ಗೋಮಾತೆಯನ್ನು ಪೂಜಿಸುವ ದೃಷ್ಟಿಯಲ್ಲಿ ನಾವೆಲ್ಲರೂ ಮುಂದೆ ಸಾಗೋಣವೆಂಬ ಸಂದೇಶವನ್ನು ಎಂ.ಆರ್.ಎಂ ನ ಮೊಹಮ್ಮದ್ ಅಫ್ಜಲ್ ನೀಡಿದರು. "ಗಾಯ್ ಔರ್ ಇಸ್ಲಾಮ್" (ಗೋವು ಮತ್ತು ಇಸ್ಲಾಂ) ಎಂಬ ಕಿರುಹೊತ್ತಗೆಯನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.



**ಅರಣ್ಯ ಸಂರಕ್ಷಣೆಯಲ್ಲಿ ಗಣನೀಯ ಸೇವೆ ಸಲ್ಲಿಸಿದ ಭಾರತದ ಅರಣ್ಯ ಸಂರಕ್ಷಕರಾದ ಸುಖರಾಮ್ ಬೈಗಾ, ಉಜಿಯಾರೊ ಬಾಯಿ, ಗೋಪಾಲ್ ಮಂಡಲ್ ಅವರಿಗೆ ದಕ್ಷಿಣ ಆಫ್ರಿಕಾದ ಡರ್ಬನ್‌ನಲ್ಲಿ ನಡೆಯುವ 5 ದಿನದ ವಿಶ್ವ ಅರಣ್ಯ ಕಾಂಗ್ರೆಸ್‌ನಲ್ಲಿ ಭಾಗವಹಿಸಲು ಆಹ್ವಾನ ದೊರೆತಿದೆ. ಪಾಂಡಿಚೆರಿ ಮೂಲದ ಬುಡಕಟ್ಟು ಮಹಿಳೆ ಉಜಿಯಾರೊ ತನ್ನ ಸಹವರ್ತಿಗಳ ಜೊತೆಗೂಡಿ ಕಾಡ್ಗಿಚ್ಚು, ಅಕ್ರಮ ಮರ ಸಾಗಣೆ ನಡೆಯುತ್ತಿದ್ದ ಮಧ್ಯಪ್ರದೇಶದ ದಿಂಡೋರಿಯಲ್ಲಿ ಅರಣ್ಯ ರಕ್ಷಣೆಗೆ ಸಾಕಷ್ಟು ಕೆಲಸ ಮಾಡಿದ್ದಾರೆ. ಸುಖಾರಾಮ್ ಮತ್ತು ಗೋಪಾಲ್ ಅವರು ಹುಲಿ ಸಂರಕ್ಷಣೆ, ಮೀನುಗಾರಿಕೆ, ಕಾಡು ಸಂರಕ್ಷಣೆ, ಜೇನು ಸಾಕಣೆ ಮೊದಲಾದ ವಿಷಯಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.**



ಗುಜರಾತ್ ಮೂಲದ ಅಮಿತ್ ವೈದ್ಯ ಎಂಬುವವರು ಹುಟ್ಟಿ ಬೆಳೆದದ್ದು ಅಮೇರಿಕಾದಲ್ಲಿ. ಅರ್ಥಶಾಸ್ತ್ರದಲ್ಲಿ ಪಿಹೆಚ್‌ಡಿ ಪಡೆದು ಕೆಲಸ ಮಾಡುತ್ತಿದ್ದ ಇವರಿಗೆ ತನ್ನ 27ನೇ ವಯಸ್ಸಿನಲ್ಲಿ ಕ್ಯಾನ್ಸರ್ ಇದೆಯೆಂದು ತಿಳಿಯಿತು. ಎರಡು ವರ್ಷ ಅಮೇರಿಕಾದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅಮಿತ್ ಕಡೆಯ ಪ್ರಯತ್ನವೆಂಬಂತೆ ಗುಜರಾತಿಗೆ ಬಂದು ಅಲ್ಲಿನ ಒಂದು ಆಸ್ಪತ್ರೆಯಲ್ಲಿ ಯೋಗ, ಧ್ಯಾನದ ಜೊತೆಗೆ ದೇಸಿ ಹಸುವಿನ ಹಾಲು, ಮೊಸರು, ತುಪ್ಪ, ಗೋಮೂತ್ರ, ಗೋಮಯವನ್ನೇ ಸೇವಿಸುತ್ತಿದ್ದ ಇವರು ಕ್ರಮೇಣ ಕ್ಯಾನ್ಸರ್‌ನಿಂದ ದೂರವಾಗತೊಡಗಿದರು. 18 ತಿಂಗಳ ಈ ಚಿಕಿತ್ಸಾ ಕ್ರಮದಿಂದ ಈಗ ಅಮಿತ್ ಕ್ಯಾನ್ಸರ್‌ನಿಂದ ಪೂರ್ಣ ಗುಣಮುಖರಾಗಿದ್ದಾರೆ. "ಹೋಲಿ ಕೌ: ಹೌ ಎ ಕೌ ಸೇವ್ಡ್ ಮೈ ಲೈಫ್" (ಪವಿತ್ರ ಗೋವು: ಒಂದು ಗೋವು ಹೇಗೆ ನನ್ನ ಜೀವ ಉಳಿಸಿತು) ಎಂಬ ಪುಸ್ತಕವನ್ನೂ ಬರೆದು ಅದರಲ್ಲಿ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.

**ಯಾನ್ ಕ್ರಿಸ್ತೆಫ್ ಜೆಸ್ಕೆ, ಜರ್ಮನಿಯಿಂದ ಭಾರತಕ್ಕೆ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿನಿಮಯ ಯೋಜನೆಯಡಿ ಅಧ್ಯಯನಕ್ಕಾಗಿ ಆಗಮಿಸಿದವರು. ಈಗ ಉಡುಪಿಯ ಸಾವಯವ ಕೃಷಿಕರ ತೋಟದಲ್ಲಿ ಹಾರೆ ಹಿಡಿದು ಕೃಷಿಕಾರ್ಯದಲ್ಲಿ ತೊಡಗಿದ್ದಾರೆ. ಭಾರತದಲ್ಲಿನ ಹವಾಮಾನ, ಬೆಳೆಗೆ ಪೂರಕ ವಾತಾವರಣ, ನೀರಿನ ಲಭ್ಯತೆ, ಪರಿಸರ ಮಾಲಿನ್ಯ, ತ್ಯಾಜ್ಯ ನಿರ್ವಹಣೆ ಬಗ್ಗೆ ತಿಳಿದುಕೊಂಡು ಜರ್ಮನಿಯಲ್ಲೂ ಅನುಷ್ಠಾನಗೊಳಿಸುವ ಆಸೆ ಅವರದ್ದು. ತಿನ್ನುವ ಆಹಾರವನ್ನು ವಿಷಮುಕ್ತಗೊಳಿಸಲು ನಾನು ಸಾವಯವ ಕೃಷಿ ಬಗ್ಗೆ ಅಧ್ಯಯನ ಕೈಗೊಂಡಿದ್ದೇನೆ. ಇಲ್ಲಿನ ಪರಿಸರ, ಪಶ್ಚಿಮಘಟ್ಟದ ವೈವಿಧ್ಯದ ಬಗ್ಗೆಯೂ ತಿಳಿದುಕೊಳ್ಳುವ ಕುತೂಹಲವಿದೆ ಎನ್ನುವ ಜೆಸ್ಕೆ, ಭಾರತ ದೇಶದ ಸಂಸ್ಕೃತಿಯ ಬಗ್ಗೆ ಅಪಾರವಾದ ಮೆಚ್ಚುಗೆಯ ಮಾತನ್ನಾಡುತ್ತಾರೆ.**

ರೈತರ ಆತ್ಮಹತ್ಯೆಯ ಸುದ್ದಿಯನ್ನು ಪ್ರತಿದಿನವೂ ಕೇಳುತ್ತಿದ್ದೇವೆ. ಬರಗಾಲ ಪೀಡಿತರಾದ ರೈತರು ಸಾಲಬಾಧೆ ಎದುರಿಸಲಾಗದೆ ಸಾವಿಗೆ ಶರಣಾಗುತ್ತಿದ್ದಾರೆ. ಆದರೆ ಮಹಾರಾಷ್ಟ್ರದ ರೈತರೊಬ್ಬರು ಬರದ ನಡುವೆಯೂ ತಮ್ಮ ಪೂರ್ತಿ ಜೋಳದ ಹೊಲವನ್ನು ಹಕ್ಕಿ ಪಕ್ಷಿಗಳಿಗೆ ಆಹಾರಕ್ಕೆಂದು ತ್ಯಾಗ ಮಾಡಿ ಮಾನವೀಯತೆ ಮೆರೆದಿದ್ದಾರೆ. ಬರವಿರುವ ಪ್ರದೇಶದಲ್ಲಿ ಪಕ್ಷಿಗಳು ನೀರಿಲ್ಲದೇ ಸಾಯುವ ಬದಲು ತಮ್ಮ ಹೊಲದಲ್ಲಿ ಬೆಳೆದ ಜೋಳವನ್ನು ಸೇವಿಸಿಯಾದರೂ ಜೀವ ಉಳಿಯಲಿ ಎಂಬ ಉದಾರ ಮನೋಭಾವದ ರೈತರು ಬಹಳ ವಿರಳ. ಜೊತೆಗೆ ಹಕ್ಕಿಗಳಿಗೆ ನೀರಿನ ಬಟ್ಟಲುಗಳನ್ನೂ ಹೊಲದ ತುಂಬ ನೇತುಹಾಕಿರುವ ಅಶೋಕ್ ಸೋನುಲೆ ಎಂಬ ಈ ರೈತರ ಈ ಪಕ್ಷಿಪ್ರೀತಿ ನಿಜಕ್ಕೂ ಶ್ಲಾಘನೀಯ.




**ರೈಲ್ವೆ ನಿಲ್ದಾಣಕ್ಕೆ ಬರುವ ಅಂಧರು ಪ್ಲಾಟ್‌ಫಾರಂ, ಶೌಚಗೃಹ, ವಿಶ್ರಾಂತಿ ಕೊಠಡಿ, ಕ್ಯಾಂಟೀನ್‌ಗಳಿಗೆ ತೆರಳಲು ಪರದಾಡುವುದು ನಿತ್ಯವೂ ಕಾಣುವ ದೃಶ್ಯ. ಮೈಸೂರು ಪ್ರವಾಸಿ ತಾಣವಾಗಿರುವುದರಿಂದ ವಿದೇಶಿಯರು, ಹೊರ ರಾಜ್ಯದವರು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ಅವರಲ್ಲಿ ಬಹುತೇಕ ಅಂಧರು ಸಂವಹನಕ್ಕೆ ಭಾಷೆಯ ತೊಡಕು ಎದುರಿಸುತ್ತಿದ್ದಾರೆ. ಇದನ್ನು ತಪ್ಪಿಸುವ ಸಲುವಾಗಿ ಅಗತ್ಯ ಮಾಹಿತಿಯನ್ನು ಒಳಗೊಂಡ ಬ್ರೈಲ್ ಲಿಪಿಯ ಫಲಕ ಹಾಗೂ ನಕ್ಷೆಗಳನ್ನು ಮೈಸೂರಿನ ರೈಲ್ವೆ ನಿಲ್ದಾಣದಲ್ಲಿ ಇತ್ತೀಚೆಗೆ ಅಳವಡಿಸಲಾಗಿದೆ.**

ಸಯ್ಯದ್ ಸಜ್ಜದ್ ಅಹ್ಮದ್ ಎಂಬುವವರು ಹಣ್ಣು ವ್ಯಾಪಾರಿಯಾಗಿದ್ದವರು. ಹದಿನೈದು ವರ್ಷಗಳ ಕೆಳಗೆ ಬೆಂಗಳೂರಿಗೆ ಬಂದು ನೆಲೆಸಿ ಟಿ.ವಿ, ರೇಡಿಯೋ ರಿಪೇರಿ ಕೆಲಸವನ್ನು ಕಲಿತು ಒಂದು ಅಂಗಡಿಯನ್ನೂ ತೆರೆದಿದ್ದರು. 63 ವರ್ಷದ ಇವರು ಈಗ ಸೋಲಾರ್ ಚಾಲಿತ ಕಾರೊಂದನ್ನು ತಯಾರಿಸಿದ್ದಾರೆ. ಕೆಲ ವರ್ಷಗಳ ಹಿಂದೆ ಅಂಗವಿಕಲರಿಗೋಸ್ಕರವೇ ದ್ವಿಚಕ್ರವಾಹನವನ್ನು ತಯಾರಿಸಿದ್ದ ಇವರು, ಪರಿಸರ ಮಾಲಿನ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು ಎಂಬ ಮಹದಾಸೆಯಿಂದ ಈಗ ಸೋಲಾರ್ ಕಾರನ್ನು ಬಳಸುತ್ತಿದ್ದಾರೆ. ಡಿಸೆಂಬರ್ ತಿಂಗಳಲ್ಲಿ ದೆಹಲಿಯಲ್ಲಿ ನಡೆಯುವ ವಿಜ್ಞಾನ ಮೇಳದಲ್ಲಿ ಪಾಲ್ಗೊಳ್ಳಲು ತಮ್ಮ ಕಾರಿನಲ್ಲಿಯೇ ನವೆಂಬರ್ 1 ರಂದು ಬೆಂಗಳೂರಿನಿಂದ ಹೊರಟಿದ್ದಾರೆ.

**ಅಮೇರಿಕಾದ ಸೌರ ವಿದ್ಯುತ್ ಕಂಪೆನಿ ಸನ್ ಎಡಿಸನ್, ಆಂಧ್ರಪ್ರದೇಶದಲ್ಲಿ 500 ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಯನ್ನು ಪ್ರಾರಂಭಿಸಲಿದೆ. ಯುನಿಟ್‌ಗೆ 4.63 ರೂಪಾಯಿ ಬೆಲೆಯಲ್ಲಿ ಇದು ಆಂಧ್ರಪ್ರದೇಶಕ್ಕೆ ವಿದ್ಯುತ್ ಒದಗಿಸಲಿದೆ. ಆಂಧ್ರಪ್ರದೇಶದ ಘನಿ ಸೋಲಾರ್ ಪಾರ್ಕ್‌ನಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಸೋಲಾರ್ ಮಿಷನ್ ಅಡಿಯಲ್ಲಿ ಸ್ಥಾಪನೆಯಾಗಲಿರುವ ಈ ಯೋಜನೆ ದೇಶದಲ್ಲೇ ಅತಿ ಕಡಿಮೆ ಬೆಲೆಯಲ್ಲಿ ಸೌರವಿದ್ಯುತ್ ಒದಗಿಸಲಿದೆ. ಕೇಂದ್ರದ ಬಿಜೆಪಿ ಸರ್ಕಾರವು ಮುಂದಿನ ದಿನಗಳಲ್ಲಿ 1.75 ಲಕ್ಷ ಮೆಗಾವ್ಯಾಟ್‌ನಷ್ಟು ವಿದ್ಯುತ್ ಅನ್ನು ಸೌರ ವಿದ್ಯುತ್ ಯೋಜನೆಯ ಮೂಲಕ ಉತ್ಪಾದಿಸುವ ಗುರಿ ಹೊಂದಿದೆ. ಇದರಿಂದ ಇನ್ನು ಕೆಲವೇ ವರ್ಷಗಳಲ್ಲಿ ದೇಶದ ವಿದ್ಯುತ್ ಸಮಸ್ಯೆ ಸಂಪೂರ್ಣವಾಗಿ ಪರಿಹಾರವಾಗುವ ನಿರೀಕ್ಷೆಯಿದೆ.**

ಅಂತರರಾಷ್ಟ್ರೀಯ ಮುಸ್ಲಿಂ ಸಂಘಟನೆ ಹಿಜ್ಬ್–ಉತ್–ತಹ್ರೀರ್‌ನ ಆಸ್ಟ್ರೇಲಿಯಾದ ಶಾಖೆ ಆಸ್ಟ್ರೇಲಿಯಾದ ಮುಸ್ಲಿಂ ಮಕ್ಕಳು ರಾಷ್ಟ್ರಗೀತೆ ಹಾಡುವುದನ್ನು ಕಡ್ಡಾಯ ಮಾಡಬಾರದು ಎಂದು ಹೇಳಿದೆ. ಮುಸ್ಲಿಮರನ್ನು ಅಪರಾಧಿಗಳಂತೆ ನೋಡಲಾಗುತ್ತಿದೆ ಎಂಬ ವಿಷಯದ ಮೇಲಿನ ವಿಚಾರ ಸಂಕಿರಣದಲ್ಲಿ ಅದು ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಮುಸ್ಲಿಮರ ಈ ನಿಲುವಿಗೆ ವಿಶ್ವದಾದ್ಯಂತ ವ್ಯಾಪಕ ಟೀಕೆ ವ್ಯಕ್ತವಾಗಿದೆ. ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದಂತೆ ಆಸ್ಟ್ರೇಲಿಯಾ ಸರ್ಕಾರ ತೆಗೆದುಕೊಳ್ಳುತ್ತಿರುವ ಕೆಲವು ಕಠಿಣ ನಿರ್ಧಾರಗಳನ್ನು ಈ ಮತೀಯ–ರಾಜಕೀಯ ಸಂಘಟನೆ ವಿರೋಧಿಸುತ್ತಾ ಬಂದಿದ್ದು, ವಿಶ್ವದಾದ್ಯಂತ ಹಲವು ದೇಶಗಳಲ್ಲಿ ತನ್ನ ಶಾಖೆಯನ್ನು ಹೊಂದಿದೆ.

**ಇತ್ತೀಚೆಗೆ ಅಮೇರಿಕಾದಲ್ಲಿ ನಡೆದ 'ರೇಸ್ ಎಕ್ರಾಸ್ ಅಮೇರಿಕಾ' ಸೈಕಲ್ ಸವಾರಿ ಪಂದ್ಯದಲ್ಲಿ ಭಾರತೀಯ ಮೂಲದ ವೈದ್ಯ ಸಹೋದರರಾದ ಡಾ। ಹಿತೇಂದ್ರ ಮಹಾಜನ್ (ಅರಿವಳಿಕೆ ತಜ್ಞ) ಹಾಗೂ ಡಾ। ಮಹೇಂದ್ರ ಮಹಾಜನ್ (ದಂತ ವೈದ್ಯ) ವಿಜೇತರಾಗಿದ್ದಾರೆ. ಅತ್ಯಂತ ಕ್ಲಿಷ್ಟಕರವಾದ, ಅಮೇರಿಕಾದ ಪಶ್ಚಿಮ ಕರಾವಳಿ ತೀರದಿಂದ ಪೂರ್ವ ತೀರದವರೆಗಿನ 4,800 ಕಿ.ಮೀ. ದೂರದ ಈ ಸೈಕಲ್ ರೇಸ್ ಪಂದ್ಯವನ್ನು ದಾಖಲೆಯ 8 ದಿನ 14 ಗಂಟೆಗಳಲ್ಲಿ ಕ್ರಮಿಸಿ ಇವರು ವಿಜೇತರಾಗಿದ್ದರು. 'ಟೀಮ್ ಇಂಡಿಯಾ: ವಿಷನ್ ಫಾರ್ ಟ್ರೈಬಲ್ಸ್' (ಟೀಮ್ ಇಂಡಿಯಾ: ವನವಾಸಿಗಳ ಭವಿಷ್ಯಕ್ಕಾಗಿ) ಎಂದು ತಮ್ಮ ತಂಡವನ್ನು ಹೆಸರಿಸಿಕೊಂಡಿದ್ದ ಈ ಸಹೋದರರು ನಾಸಿಕದ ಸಮಾಜಸೇವಾ ಸಂಸ್ಥೆ ಕಲ್ಪತರು ಪ್ರತಿಷ್ಠಾನದ ಚಿಕಿತ್ಸಾಲಯಕ್ಕೆ ನಿಧಿ ಸಂಗ್ರಹ ಮಾಡಲು ಈ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಮಹಾಜನ್ ಸಹೋದರರು ಈ ಸ್ಪರ್ಧೆಯಲ್ಲಿ ಕ್ರಮಿಸಿದ ಪ್ರತಿ 100 ಕಿ. ಮೀ. ದೂರಕ್ಕೆ, 5 ಕ್ಯಾಟರಾಕ್ಟ್ ಶಸ್ತ್ರಚಿಕಿತ್ಸೆ ಹಾಗೂ 1 ಕಾರ್ನಿಯಾ ಕಸಿ ಚಿಕಿತ್ಸೆಗೆ ಅಗತ್ಯವಾದ ಹಣ ಕಲ್ಪತರು ಪ್ರತಿಷ್ಠಾನಕ್ಕೆ ಸಂದಾಯವಾಗುತ್ತಿತ್ತು.**

**ಛತ್ತೀಸಘಡದ ದುರ್ಗ್ ಜಿಲ್ಲೆಯ ಭಿಲೈನ ಈಶ್ವರಚಂದ್ರ ಬರ್ಗಾ ಅವರು ಒಂದು ವಿದ್ಯಾಸಂಸ್ಥೆಯಲ್ಲಿ ತೋಟದ ಮಾಲಿಯಾಗಿ ಕೆಲಸ ಮಾಡುತ್ತಿದ್ದರು. ಇಂದು ಅದೇ ಸಂಸ್ಥೆಯ ಕಾಲೇಜೊಂದರಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿರುವುದು ರೋಚಕವಾದರೂ ಸತ್ಯ. 48 ವರ್ಷ ಪ್ರಾಯದ ಡಾಕ್ಟರೇಟ್ ಪದವೀಧರರಾದ ಈಶ್ವರಚಂದ್ರ ಅವರ ಈ ಪರಿಶ್ರಮದ ಪಯಣ ಆರಂಭವಾಗಿದ್ದು ಗುಟಿಯಾ ಮತ್ತು ಬೈತಾಲ್ಪುರ್ ಎಂಬ ಹಳ್ಳಿಯಲ್ಲಿ ಅವರ ಬಾಲ್ಯದ ಶಾಲಾ ಶಿಕ್ಷಣ ಮುಗಿದ ನಂತರ.**

**ಆಗ 19 ವರ್ಷ ಪ್ರಾಯದ ಈಶ್ವರಚಂದ್ರ ತಮ್ಮ ಕುಟುಂಬಕ್ಕೆ ಆಸರೆಯಾಗಲು ಉದ್ಯೋಗವನ್ನರಸುತ್ತಾ 1985ರಲ್ಲಿ ಭಿಲೈಗೆ ಬಂದರು. ತಮ್ಮ ಸಂಬಂಧಿಕರ ಜೊತೆ ಉಳಿದುಕೊಂಡು, ಬಟ್ಟೆ ಅಂಗಡಿ ಒಂದರಲ್ಲಿ ಮಾರಾಟಗಾರನಾಗಿ ತಿಂಗಳಿಗೆ 150 ರೂಪಾಯಿ ಸಂಬಳಕ್ಕೆ ಕೆಲಸಕ್ಕೆ ಸೇರಿ, ಆ ಹಣದಿಂದ ಬಿ.ಎ. ಪದವಿಗೆ ನೊಂದಾಯಿಸಿಕೊಂಡರು. ಅನಂತರ ತನ್ನ ಸಂಬಂಧಿಕರ ಪರಿಚಯದಿಂದ ಕಲ್ಯಾಣ್ ಕಾಲೇಜಿನಲ್ಲಿ ಮಾಲಿಯಾಗಿ, ಪಾರ್ಕಿಂಗ್ ನಿರ್ವಾಹಕರಾಗಿ, ನಂತರ ಕಟ್ಟಡ ಕಾಮಗಾರಿಯ ಮೇಸ್ತ್ರಿಯಾಗಿ ದಿನಗೂಲಿ ಕೆಲಸ ಮಾಡುತ್ತಿದ್ದರು. ಕೆಲಸ ಮಾಡುತ್ತಲೇ 1989 ರಲ್ಲಿ ಬಿ.ಎ. ಪದವಿಧರರಾದ ಅವರು ಕಾಲೇಜಿನ ಉಪನ್ಯಾಸಕರಾಗಿ ಸೇರಿಕೊಂಡರು. ಅವರು ರಾತ್ರಿ ಪಾಳಿಯ ಕಾವಲುಗಾರನಾಗಿ ಕೆಲಸ ಮಾಡುತ್ತಾ, ಹಗಲು ತರಗತಿಗಳನ್ನು ಮುಗಿಸಿಕೊಂಡು, ತನ್ನ ವಿದ್ಯಾರ್ಜನೆಯನ್ನು ಮುಂದುವರಿಸಿದ್ದರು. ಹೀಗೆ ಅವರು ಎಂ.ಎಡ್, ಬಿ.ಪಿ.ಎಡ್ ಮತ್ತು ಎಂ.ಫಿಲ್ ಪದವಿಗಳನ್ನು ಕೆಲಸ ಮಾಡುತ್ತಲೇ ಪಡೆದುಕೊಂಡರು. ಅವರ ಈ ಕಾರ್ಯಕ್ಷಮತೆ ಹಾಗೂ ಪರಿಶ್ರಮವನ್ನು ಗುರುತಿಸಿದ ಛತ್ತೀಸಘಡ ಕಲ್ಯಾಣ್ ಶಿಕ್ಷಾ ಸಮಿತಿ, ಅಹೇರಿಯಲ್ಲಿ ಹೊಸದಾಗಿ ಆರಂಭಿಸಿದ ಕಾಲೇಜಿಗೆ ಅವರನ್ನೇ ಪ್ರಾಂಶುಪಾಲರಾಗಿ ನಿಯೋಜಿಸಿತು. ಶ್ರಮವಿದ್ದಲ್ಲಿ ಫಲವಿದೆ ಎನ್ನುವುದನ್ನು ಸಾಧಿಸಿ ತೋರಿಸಿದ ಇವರು ಅನೇಕರಿಗೆ ಸಾಧನೆ ಮಾಡಲು ಪ್ರೇರಣೆಯಾಗಿದ್ದಾರೆ.**

ಕೊಲ್ಕತ್ತಾ ಮತ್ತು ತ್ರಿಪುರಾ ರಾಜ್ಯದ ರಾಜಧಾನಿ ಅಗರ್ತಲಾ ನಡುವಿನ ದೂರ ಇದೀಗ 1,550 ಕಿ.ಮೀ. ನಿಂದ 640 ಕಿ.ಮೀ ಗೆ ಇಳಿದಿದೆ. ಕೇಂದ್ರ ಸರ್ಕಾರ ಪ್ರಾರಂಭಿಸಿರುವ ಬಿಬಿಐಎನ್ (ಬಾಂಗ್ಲಾದೇಶ–ಭೂತಾನ್–ಇಂಡಿಯಾ–ನೇಪಾಳ) ಯೋಜನೆಯ ಮೂಲಕ ಈ ನಾಲ್ಕು ದೇಶಗಳಲ್ಲಿ ಮುಕ್ತವಾಗಿ ವಾಹನ ಸಂಚಾರಕ್ಕೆ ಅವಕಾಶ ಲಭಿಸಿದೆ. ಕಳೆದ ನವೆಂಬರ್ 1 ರಂದು ಕೊಲ್ಕತಾದಿಂದ ಅಗರ್ತಲಾಗೆ ಬಾಂಗ್ಲಾದೇಶದ ಮೂಲಕ ಹೋಗುವ ಸರಕು ಸಾಗಣೆ ವಾಹನಗಳಿಗೆ ಚಾಲನೆ ನೀಡಲಾಯಿತು. ಇದರಿಂದ ಸಮಯ ಮತ್ತು ಇಂಧನ ಎರಡೂ ಉಳಿತಾಯವಾದಂತಾಗಿದೆ.

## ವಿಶ್ವದಲ್ಲಿ ಭಾರತ ಬ್ರ್ಯಾಂಡ್ ನಂ. 7

**ವಿಶ್ವದ ಮೌಲ್ಯಯುತ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ 7ನೇ ಸ್ಥಾನ ಪಡೆದಿದೆ. ದೇಶದ ಮೈಲ್ಯ ಶೇ. 32ರಷ್ಟು ವೃದ್ಧಿಗೊಳ್ಳುವ ಮೂಲಕ 2.1 ಬಿಲಿಯನ್ ಡಾಲರ್‌ಗಳಷ್ಟಾಗಿದೆ. ಇದರಿಂದಾಗಿ, ಕಳೆದ ಬಾರಿ 8ನೇ ಸ್ಥಾನದಲ್ಲಿದ್ದ ಭಾರತ ಈ ಬಾರಿ ಒಂದು ಸ್ಥಾನ ಮೇಲಕ್ಕೇರಿದೆ. ಇದೇ ರೀತಿ ಭಾರತದ ಆರ್ಥಿಕತೆ ಪ್ರಗತಿ ಕಂಡಲ್ಲಿ ಮುಂದಿನ ವರ್ಷ ಭಾರತ 5ನೇ ಸ್ಥಾನಕ್ಕೆ ಬರುವ ಸಾಧ್ಯತೆ ಹೆಚ್ಚಾಗಿದೆ. ಐದು ವರ್ಷಗಳ ಅವಧಿಯಲ್ಲಿ ಒಂದು ದೇಶದ ಬ್ರ್ಯಾಂಡ್‌ಗಳ ಮಾರಾಟದ ಮೌಲ್ಯವನ್ನು ಆಧರಿಸಿ ಈ ಸ್ಥಾನ ನಿರ್ಧರಿಸಲಾಗುತ್ತದೆ. ಈ ವರ್ಷ ಶೇ. 32 ರಷ್ಟು ಪ್ರಗತಿ ಸಾಧಿಸುವ ಮೂಲಕ ಭಾರತ ಅತಿ ಹೆಚ್ಚು ವೇಗವಾಗಿ ಮುನ್ನಡೆಯುತ್ತಿರುವ ರಾಷ್ಟ್ರವಾಗಿ ಗುರುತಿಸಲ್ಪಟ್ಟಿದೆ.**

ಪುಂಗವ PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-11-2015



# ಜನಸಂಖ್ಯಾ ಏರಿಕೆ ದರದಲ್ಲಿ ಅಸಮತೋಲನ : ಆರೆಸ್ಸೆಸ್ ಕಳವಳ

## ರಾಂಚಿಯಲ್ಲಿ ಆರೆಸ್ಸೆಸ್ ಅಖಿಲ ಭಾರತೀಯ ಕಾರ್ಯಕಾರಿಣಿ ಮಂಡಲಿ ಸಭೆ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಕಾರ್ಯಕಾರಿಣಿ ಮಂಡಳಿಯ ಬೈಠಕ್ ಇತ್ತೀಚೆಗೆ ರಾಂಚಿಯಲ್ಲಿ ಮುಕ್ತಾಯಗೊಂಡಿದ್ದು, ಜನಸಂಖ್ಯಾ ಏರಿಕೆ ದರದಲ್ಲಿ ಅಸಮತೋಲನ ಕಂಡುಬಂದಿರುವುದು ದೇಶಕ್ಕೊಂದು ಸವಾಲು ಎಂಬ ನಿರ್ಣಯ ಕೈಗೊಂಡಿದೆ.

2011ರ ಜನಗಣತಿಯು ನಮ್ಮ ಜನಸಂಖ್ಯಾ ನೀತಿಯನ್ನು ಪುನರ್ವಿಮರ್ಶಿಸಬೇಕಾದ ಅಗತ್ಯವನ್ನು ಸಾರಿದೆ ಎಂದು ಆರೆಸ್ಸೆಸ್ ಅಭಿಪ್ರಾಯಪಟ್ಟಿದೆ. ವಿವಿಧ ಮತಗಳ ಜನಸಂಖ್ಯಾ ಏರಿಕೆಯ ಪ್ರಮಾಣದಲ್ಲಿರುವ ಭಾರೀ ವ್ಯತ್ಯಾಸ, ಒಳನುಸುಳುವಿಕೆ ಹಾಗೂ ಮತಾಂತರದ ಪರಿಣಾಮವಾಗಿ ಜನಸಂಖ್ಯಾ ಪ್ರಮಾಣದಲ್ಲಿ ಧಾರ್ಮಿಕ ಅಸಮತೋಲನ ಕಂಡುಬಂದಿದೆ. ವಿಶೇಷವಾಗಿ ದೇಶದ ಗಡಿ ಪ್ರದೇಶಗಳಲ್ಲಿ ಇಂತಹ ಪರಿಣಾಮ ಕಂಡುಬಂದಿದ್ದು, ಅದು ದೇಶದ ಏಕತೆ, ಸಮಗ್ರತೆ ಹಾಗೂ ಸಾಂಸ್ಕೃತಿಕ ಅಸ್ಮಿತೆಗೆ ಒಡ್ಡಿದ ಬೆದರಿಕೆಯಾಗಿದೆ ಎಂದು ನಿರ್ಣಯ ತಿಳಿಸಿದೆ.

ಮುಸ್ಲಿಮರ ಜನಸಂಖ್ಯಾ ಪ್ರಮಾಣ ಏರುಗತಿಯಲ್ಲಿದ್ದು, ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಬಿಹಾರದ ಗಡಿ ರಾಜ್ಯಗಳಲ್ಲಿ ಇದು ರಾಷ್ಟ್ರೀಯ ಸರಾಸರಿಗಿಂತ ಅತಿ ಹೆಚ್ಚಿನದಾಗಿದೆ. ಮುಖ್ಯವಾಗಿ ಬಾಂಗ್ಲಾದೇಶದಿಂದ



ತಡೆಯಿಲ್ಲದ ಒಳನುಸುಳುವಿಕೆಯನ್ನು ಇದು ಸಂಕೇತಿಸುತ್ತದೆ. ಈ ಸಂಬಂಧವಾಗಿ ಸುಪ್ರೀಂಕೋರ್ಟ್ ನೇಮಿಸಿದ ಉಪಮನ್ಯು ಹಝಾರಿಕ ಆಯೋಗದ ವರದಿ ಹಾಗೂ ಇತರ ಅನೇಕ ನ್ಯಾಯಾಂಗದ ವರದಿಗಳು ಕೂಡ ಈ ಅಂಶವನ್ನು ಎತ್ತಿ ಹಿಡಿದಿವೆ. ಗಡಿ ಪ್ರದೇಶದ ಜಿಲ್ಲೆಗಳಲ್ಲಿ ನುಸುಳುಕೋರರು ನಾಗರಿಕ ಹಕ್ಕುಗಳನ್ನು ಪಡೆಯಲು ಹುನ್ನಾರ ನಡೆಸುತ್ತಿರುವುದು ಕಳವಳಕಾರಿಯಾಗಿದೆ ಎಂದು ನಿರ್ಣಯ ತಿಳಿಸಿದೆ.

ಈಶಾನ್ಯ ಭಾರತದ ರಾಜ್ಯಗಳಲ್ಲಿ ಜನಸಂಖ್ಯೆಯ ಧಾರ್ಮಿಕ ಅಸಮತೋಲನ ಗಂಭೀರವೆನ್ನುವಷ್ಟು ಪ್ರಮಾಣದಲ್ಲಿ ಹೆಚ್ಚಿದೆ. ಅರುಣಾಚಲ ಪ್ರದೇಶದಲ್ಲಿ ಭಾರತೀಯ ಮೂಲದ ವಿವಿಧ ಜಾತಿಯ ಜನಸಂಖ್ಯಾ ಪ್ರಮಾಣ 1951ರಲ್ಲಿ ಶೇ. 99.21 ಇತ್ತು. 2001ರಲ್ಲಿ ಇದು ಶೇ. 81.3ಕ್ಕೆ ಕುಸಿಯಿತು. 2011ರಲ್ಲಿ ಈ ಪ್ರಮಾಣ ಶೇ. 67ಕ್ಕೆ ಇನ್ನಷ್ಟು ಕುಸಿದಿದೆ. ಕೇವಲ ಒಂದು ದಶಕದಲ್ಲಿ ಅರುಣಾಚಲ ಪ್ರದೇಶದ ಕ್ರೈಸ್ತರ ಜನಸಂಖ್ಯೆ ಶೇ. 13ರಷ್ಟು ಏರಿಕೆಯಾಗಿದೆ. ಅದೇ ರೀತಿ ಮಣಿಪುರದ ಜನಸಂಖ್ಯೆಯಲ್ಲಿ ಭಾರತೀಯ ಮೂಲದ ಮತಾನುಯಾಯಿಗಳ ಜನಸಂಖ್ಯಾ ಪ್ರಮಾಣ 1951ರಲ್ಲಿ ಶೇ. 80 ಇದ್ದದ್ದು, 2011ರಲ್ಲಿ ಶೇ. 50ಕ್ಕೆ ಕುಸಿದಿದೆ. ಈ ನಿದರ್ಶನಗಳು ಹಾಗೂ ಅಂಶಗಳು ಸ್ಥಾಪಿತ ಹಿತಾಸಕ್ತಿಗಳಿಂದ ಧಾರ್ಮಿಕ ಮತಾಂತರ ಚಟುವಟಿಕೆ ಅವ್ಯಾಹತವಾಗಿ ನಡೆದಿರುವುದನ್ನು ಸಂಕೇತಿಸುತ್ತವೆ.

ಅಖಿಲ ಭಾರತೀಯ ಕಾರ್ಯಕಾರಿ ಮಂಡಳಿಯು ಈ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದು, ರಾಷ್ಟ್ರೀಯ ಜನಸಂಖ್ಯಾ ನೀತಿಯಲ್ಲಿ ಸುಧಾರಣೆ ತರಲು ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ. ತನ್ಮೂಲಕ ಧಾರ್ಮಿಕ ಜನಸಂಖ್ಯಾ ಅಸಮತೋಲನವನ್ನು ನಿಯಂತ್ರಿಸಲು ಒತ್ತಾಯಿಸಿದೆ. ಗಡಿಪ್ರದೇಶದಲ್ಲಿ ಕಾನೂನುಬಾಹಿರ ಒಳನುಸುಳುವಿಕೆಯನ್ನು ಸಂಪೂರ್ಣ ತಡೆಗಟ್ಟಬೇಕು ಹಾಗೂ ದೇಶದ ನಾಗರಿಕರ ರಾಷ್ಟ್ರೀಯ ದಾಖಲಾತಿ ಸಿದ್ಧಪಡಿಸಬೇಕು ಎಂದು ಎಬಿಕೆಎಂ ಆಗ್ರಹಿಸಿದೆ. ನುಸುಳುಕೋರರು ಅಕ್ರಮವಾಗಿ ನಾಗರಿಕ ಹಕ್ಕುಗಳನ್ನು ಪಡೆಯದಂತೆ ಹಾಗೂ ಭೂಮಿಯನ್ನು ಖರೀದಿಸದಂತೆ ತಡೆಗಟ್ಟಬೇಕಾದ ಅಗತ್ಯವಿದೆ ಎಂದು ಎಬಿಕೆಎಂ ಸರ್ಕಾರಕ್ಕೆ ಕರೆ ನೀಡಿದೆ.

# ಟಿಪ್ಪು ಜಯಂತಿ ಆಚರಣೆಗೆ ರಾಜ್ಯಾದ್ಯಂತ ವ್ಯಾಪಕ ವಿರೋಧ



ನವೆಂಬರ್ 10ರಂದು ಟಿಪ್ಪು ಸುಲ್ತಾನ್ ಜಯಂತಿಯನ್ನು ಅಧಿಕೃತ ಸರ್ಕಾರಿ ಕಾರ್ಯಕ್ರಮವಾಗಿ ಆಚರಿಸಲು ರಾಜ್ಯ ಸರ್ಕಾರ ನಿರ್ಧರಿಸಿ ಆದೇಶ ಹೊರಡಿಸಿದೆ. ಇದಕ್ಕೆ ರಾಜ್ಯಾದ್ಯಂತ ವ್ಯಾಪಕ ವಿರೋಧ ವ್ಯಕ್ತವಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಬಲವಂತದ ಮತಾಂತರ ನಡೆಸಿ, ಅದಕ್ಕೊಪ್ಪದ ಸಾವಿರಾರು ಜನರನ್ನು ಕೊಂದ, ನೂರಾರು ದೇವಾಲಯಗಳನ್ನು ಧ್ವಂಸ ಮಾಡಿದ ಟಿಪ್ಪುವಿನ ಜಯಂತಿಯನ್ನು ಆಚರಿಸುವುದು ನಾಡಿಗೆ ಮಾಡುವ ಅವಮಾನ ಎಂದು ಅನೇಕ ಸಾಹಿತಿಗಳು, ವಿವಿಧ ಜಾತಿ ಮತಗಳ ಪ್ರಮುಖರೂ ಅಭಿಪ್ರಾಯಪಟ್ಟಿದ್ದಾರೆ. ಹಲವೆಡೆ ಇದನ್ನು ವಿರೋಧಿಸಿ ಪ್ರತಿಭಟನೆಗಳೂ ನಡೆಯುತ್ತಿವೆ.

- ಚಿತ್ರದುರ್ಗದಲ್ಲಿ ರಾಜಾ ವೀರ ಮದಕರಿನಾಯಕ ಗೌರವ ಸಂರಕ್ಷಣಾ ವೇದಿಕೆ ಬೃಹತ್ ಪ್ರತಿಭಟನೆಯನ್ನು ನಡೆಸಿದೆ. ಅಲ್ಲದೇ, ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಂಡಿದೆ. ಇದನ್ನು ಖ್ಯಾತ ಸಂಶೋಧಕ, ಚಿಂತಕ ಚಿದಾನಂದಮೂರ್ತಿಯವರು ಬೆಂಬಲಿಸಿದ್ದಾರೆ.
- ಮಂಗಳೂರಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಯುನೈಟೆಡ್ ಕ್ರಿಶ್ಚಿಯನ್ ಅಸೋಸಿಯೇಶನ್ ಟಿಪ್ಪು ಜಯಂತಿ ಆಚರಣೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸಿದೆ. ಅನೇಕ ಚರ್ಚುಗಳನ್ನು ನಾಶ ಮಾಡಿ ಸಾವಿರಾರು ಕ್ರೈಸ್ತ ಬಂಧುಗಳನ್ನು ಕೊಂದ ಇತಿಹಾಸ ಹೊಂದಿರುವ ಟಿಪ್ಪು ಸುಲ್ತಾನ್ ಜಯಂತಿಯ ಆಚರಣೆ ಕ್ರೈಸ್ತ ಬಂಧುಗಳಿಗೆ ನೋವು ತಂದಿದೆ ಎಂದು ಅದು ತಿಳಿಸಿದೆ.
- ವಿಜಯಪುರದಲ್ಲಿ ಟಿಪ್ಪು ಜಯಂತಿ ಆಚರಣೆ ವಿರೋಧಿಸಿ ವಿಶ್ವ ಹಿಂದು ಪರಿಷತ್ ಮತ್ತು ಬಜರಂಗ ದಳ ಕಾರ್ಯಕರ್ತರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.
- ಮೈಸೂರು ಮತ್ತು ಕೊಡಗಿನಲ್ಲೂ ಟಿಪ್ಪು ಜಯಂತಿ ಆಚರಣೆಗೆ ಭಾರೀ ವಿರೋಧ ವ್ಯಕ್ತವಾಗಿದೆ. ಮತಾಂತರಕ್ಕೊಪ್ಪದ ಸಾವಿರಾರು ಸ್ವಾಭಿಮಾನಿ ಕೊಡವರನ್ನು ಹಿಂಸಿಸಿ ಕೊಲ್ಲಿಸಿದ ಟಿಪ್ಪುವನ್ನು ವೈಭವೀಕರಿಸುವುದು ಕೊಡವರಿಗೆ ಮಾಡುವ ಅವಮಾನ ಎಂದು ಕೊಡಗಿನ ಸಾಮಾಜಿಕ ಮುಖಂಡರು ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನಲ್ಲಿ ಡಿಸಿ ಕಛೇರಿ ಎದುರು ಬಿಜೆಪಿ ಪ್ರತಿಭಟನೆ ನಡೆಸಿದೆ.

**ಚಿತ್ರದುರ್ಗದ ಉಚ್ಚಂಗಮ್ಮನ ಗುಡಿಯ ಎರಡು ಅಂತಸ್ತನ್ನು ಕೆಡವಿ ಅಲ್ಲಿನ ಕಲ್ಲುಗಳನ್ನು ಬಳಸಿ ಜುಮ್ಮಾ ಮಸೀದಿಯನ್ನು ಟಿಪ್ಪು ಕಟ್ಟಿಸಿದ ಎಂದು ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್‌ನಲ್ಲಿ ದಾಖಲಾಗಿದೆ. ಅಲ್ಲದೇ, ವೀರ ಮದಕರಿನಾಯಕನನ್ನು ಬಂಧಿಸಿ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿರಿಸಿ ಅವನ ಖಜಾನೆಯ ಅಪಾರ ಐಶ್ವರ್ಯವನ್ನು ದೋಚಿದ. ಇಪ್ಪತ್ತು ಸಾವಿರ ಹಿಂದು ಯುವಕರನ್ನು ಮತಾಂತರಿಸಿ ಅವನ ಚೇಲಾಪಡೆ ನಿರ್ಮಿಸಿದ. ಗ್ರಾಮದೇವತೆ, ಪಾಳೇಗಾರರ ಉತ್ಸವಮೂರ್ತಿ ಏಕನಾಥೇಶ್ವರಿ, ಸಂಪಿಗೆ ಸಿದ್ಧೇಶ್ವರ ಗುಡಿಗಳನ್ನು ಹಾಳುಮಾಡಿ ಅಲ್ಲಿನ ಐಶ್ವರ್ಯವನ್ನು ಕೊಳ್ಳೆ ಹೊಡೆದ. 1779ರಲ್ಲಿ ಮದಕರಿನಾಯಕನ ತಮ್ಮ ಪರಶುರಾಮ ನಾಯಕ, ಮಗ ಕುಮಾರ ಭರಮಪ್ಪ ನಾಯಕನನ್ನು ಬಂಧಿಸಿ ಭೈರಾಪಟ್ಟಣ ಊರಿನ ಆಲದ ಮರಕ್ಕೆ ನೇಣು ಹಾಕಿದ. ಮದಕರಿನಾಯಕನಿಗೆ ವಿಷ ಕೊಟ್ಟು ಕೊಲ್ಲಿಸಿದ. ವಾಲ್ಮೀಕಿ ಜನಾಂಗದ ಅನೇಕರನ್ನು ಚಿತ್ರಹಿಂಸೆ ಕೊಟ್ಟು ಮತಾಂತರಿಸಿದ, ಕೊಲ್ಲಿಸಿದ.**

**ಟಿಪ್ಪು ಜಯಂತಿ ಎನ್ನುವುದು ಹಿಟ್ಲರ್ ಜಯಂತಿ ಇದ್ದಂತೆ. ಇಂತಹ ಆಕ್ರಮಣಕಾರರ, ಲೂಟಿಕೋರರ ಜಯಂತಿಯನ್ನು ಆಚರಿಸುವುದು ಯಾವ ಸಮಾಜಕ್ಕೂ ಶೋಭೆ ತರುವಂಥದ್ದಲ್ಲ. ಇದರ ಬದಲು ಡಾ| ಅಬ್ದುಲ್ ಕಲಾಂ, ಶಿಶುನಾಳ ಷರೀಫ, ಸಂತ ಕಬೀರರಂತಹ ಮಹಾಪುರುಷರ ಜಯಂತಿಯ ಆಚರಣೆಗೆ ಸರ್ಕಾರ ಮುಂದಾಗಬೇಕು.**

**– ಎಂ. ಚಿದಾನಂದಮೂರ್ತಿ, ಖ್ಯಾತ ಸಂಶೋಧಕ, ಚಿಂತಕ**

- ಶ್ರೀರಂಗಪಟ್ಟಣದ ದೇವಾಲಯವನ್ನು ಮಸೀದಿಯಾಗಿ ಪರಿವರ್ತಿಸಿರುವ ಕುರುಹುಗಳು ಇಂದಿಗೂ ಕಣ್ಣಿಗೆ ರಾಚುವಂತೆ ಇರುವಾಗ, ತಾನು ಹೋದಲ್ಲೆಲ್ಲಾ ದೇವಾಲಯಗಳ ಧ್ವಂಸ ಮಾಡಿದ ಟಿಪ್ಪುವನ್ನು ವೈಭವೀಕರಿಸುವುದು ಹಿಂದುಗಳಿಗೆ ಮಾಡುವ ಅಪಮಾನ ಎಂದು ಹಿಂದು ಜಾಗರಣ ವೇದಿಕೆ ತಿಳಿಸಿದೆ.

ಈ ಎಲ್ಲಾ ವಿರೋಧಗಳ ನಡುವೆಯೂ ರಾಜ್ಯ ಸರ್ಕಾರ ಟಿಪ್ಪು ಜಯಂತಿಯನ್ನು ನಡೆಸುವ ನಿರ್ಧಾರದಿಂದ ಹಿಂದೆ ಸರಿಯದಿರುವುದು ಸರ್ಕಾರದ ಹಿಂದು ವಿರೋಧಿ ನಿಲುವಿನ ಮತ್ತು ಬಹುಸಂಖ್ಯಾತರ ಭಾವನೆಗಳಿಗೆ ಬೆಲೆ ನೀಡದಿರುವ ಧಾರ್ಷ್ಟ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

# ದೇಶದಾದ್ಯಂತ ಆರೆಸ್ಸೆಸ್ ಶಾಖೆಯ ಸಂಖ್ಯೆಯಲ್ಲಿ ಹೆಚ್ಚಳ



ರಾಷ್ಟ್ರೀಯ ಸ್ವಯಂಸೇವಕ ಸಂಘದ ನೀತಿ ನಿರ್ಧಾರಗಳನ್ನು ನಿರೂಪಿಸುವ ವಾರ್ಷಿಕ ಸಭೆ ಅಖಿಲ ಭಾರತೀಯ ಕಾರ್ಯಕಾರಿಣಿ ಮಂಡಳಿ ಬೈಠಕ್ (ಎಬಿಕೆಎಂ) ಕಳೆದ ಅಕ್ಟೋಬರ್ 30 ರಿಂದ ನವೆಂಬರ್ 1 ರವರೆಗೆ ಜಾರ್ಖಂಡ್‌ನ ರಾಜಧಾನಿ ರಾಂಚಿ ನಗರದಲ್ಲಿ ನಡೆಯಿತು. ದೇಶವ್ಯಾಪಿಯಾಗಿ ನಡೆಯುತ್ತಿರುವ ಸಂಘದ ಚಟುವಟಿಕೆಗಳ ಕುರಿತಾದ ಚರ್ಚೆ–ಚಿಂತನ–ನಿರ್ಣಯಗಳು ಈ ಬೈಠಕ್‌ನಲ್ಲಿ ನಡೆಯಿತು.

- ಕಳೆದ ಒಂದು ವರ್ಷದ ಅವಧಿಯಲ್ಲಿ ಶಾಖೆಗಳ ಸಂಖ್ಯೆ 6,684ದಷ್ಟು ಹೆಚ್ಚಾಗಿ ಈಗ 50,432 ಶಾಖೆಗಳಿವೆ.
- 13,620 ಸಾಪ್ತಾಹಿಕ ಮಿಲನ್‌ಗಳು ಮತ್ತು 7,940 ತಿಂಗಳಿಗೊಮ್ಮೆ ನಡೆಯುವ ಮಂಡಳಿಗಳಿವೆ. ಒಟ್ಟು 70,000 ಕ್ಕೂ ಹೆಚ್ಚು ಸ್ಥಾನಗಳಲ್ಲಿ ಸಂಘದ ಚಟುವಟಿಕೆಗಳಿವೆ.
- ವಿವಿಧ ಸಂಘಟನೆಗಳು ನಡೆಸುವ ಸೇವಾ ಚಟುವಟಿಕೆಗಳೂ ಸೇರಿದಂತೆ ಒಟ್ಟು 1,60,000 ಕ್ಕೂ ಹೆಚ್ಚು ಸೇವಾ ಚಟುವಟಿಕೆಗಳು ನಡೆಯುತ್ತಿವೆ.
- ಸಂಘದ ಶಾಖೆಗಳಲ್ಲಿ ಭಾಗವಹಿಸುತ್ತಿರುವ ಜನರಲ್ಲಿ ಶೇ.60 ರಷ್ಟು ಜನರು 18 ರಿಂದ 40 ವರ್ಷದ ಒಳಗಿನ ಯುವಕರಿದ್ದಾರೆ.
- ನಮ್ಮ ದೇಶದ ಎಲ್ಲಾ ತಾಲ್ಲೂಕುಗಳಲ್ಲಿ ಸಂಘದ ಚಟುವಟಿಕೆ ಇದೆ. ಈಗ ಇದನ್ನು ಮಂಡಲ ಮತ್ತು ಗ್ರಾಮ ಪಂಚಾಯ್ತಿಗಳ ಮಟ್ಟಕ್ಕೆ ವಿಸ್ತರಿಸುವ ಯೋಜನೆ ಪ್ರಾರಂಭವಾಗಿದೆ.
- ಸಂಘಕ್ಕೆ ಸೇರಲು ಬಯಸಿ, rss.org ವೆಬ್‌ಸೈಟ್ 'Join RSS' ಆಯ್ಕೆಯ ಮೂಲಕ ನೋಂದಾವಣೆ ಮಾಡುವವರ ಸಂಖ್ಯೆಯು ಪ್ರತಿ ತಿಂಗಳು 1,000 ದಷ್ಟಿದೆ.

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04.
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ ವಿವರ ಮತ್ತು ವಿಳಾಸ ಬದಲಾವಣೆಗಾಗಿ : 97391 83021
ಸಂಪಾದಕೀಯ : 97312 64009